# ಬೃಹಚ್ಚರಣ

**ಸಂಪಾದಕ ಸಮಿತಿ**

| | |
|---|---|
| ಶ್ರೀ ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ಶ್ರೀ ವಿ. ಎಸ್. ಮಣಿ | ಸದಸ್ಯರು |
| ಶ್ರೀ ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಶ್ರೀ ಕೆ.ಸಿ. ನಟರಾಜನ್ | ಸಂಪಾದಕ |

ಸಂಪುಟ : 7 ಸಂಚಿಕೆ : 3 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಜುಲೈ–ಸೆಪ್ಟೆಂಬರ್ 2017




## ಅರ್ಪಣೆ

ಈ ಸಂಚಿಕೆಯನ್ನು ನಮ್ಮ ಸಮುದಾಯದ ಹಿತೈಷಿ, **ಕರ್ನಾಟಕ ಕಲಾಶ್ರೀ** ಆರ್. ಶಂಕರನಾರಾಯಣ್ ಅವರಿಗೆ ಗೌರವಗಳಿಂದ ಅರ್ಪಿಸಲಾಗಿದೆ

## ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳಿಗೆ ನಮಸ್ಕಾರ.

ಕನ್ನಡ ರಾಜ್ಯೋತ್ಸವವು ಸಮುದಾಯದ ಎಲ್ಲರಿಗೂ ಶುಭ ತರಲೆಂದು ಹಾರೈಸುತ್ತೇನೆ. ಕಾರ್ಯಕಾರಿ ಸಮಿತಿಯು ಸಾಮಾನ್ಯ ವಾರ್ಷಿಕ ಸಭೆಯಲ್ಲಿ ತೀರ್ಮಾನಿಸಿದಂತೆ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ 50 ವಸಂತಗಳ ದಾಂಪತ್ಯ ಪೂರೈಸಿದ ಹಿರಿಯ ದಂಪತಿಗಳಿಗೆ ಗೌರವ ಸಮರ್ಪಣಾ ಸಮಾರಂಭ ವಿಜೃಂಭಣೆಯಿಂದ ನಡೆಯಲು ಸಹಕಾರ ನೀಡಿದ ಮಲ್ಲಿಕಾರ್ಜುನ ದೇವಸ್ಥಾನದ ಆಡಳಿತ ಮಂಡಲಿ ಸದಸ್ಯರಿಗೂ ಹಾಗೂ ಸಹಾಯಹಸ್ತ ನೀಡಿದ ಪ್ರತಿಯೊಬ್ಬರಿಗೂ ಧನ್ಯವಾದಗಳು. ಸಂಘ ಹಮ್ಮಿಕೊಳ್ಳುವ ಒಂದು ದಿನದ ಪ್ರವಾಸಕ್ಕೂ ಇದೇ ರೀತಿ ಎಲ್ಲರ ಸಹಕಾರ ಕೋರುತ್ತೇನೆ. ಸಂಘದ ವಾರ್ಷಿಕ ನಿರ್ವಹಣಾ ವೆಚ್ಚವನ್ನು ಸ್ವಯಂ ಪ್ರೇರಿತರಾಗಿ ನೀಡುತ್ತಿರುವವರಿಗೆ ಧನ್ಯವಾದ. ನಿರ್ವಹಣಾ ವೆಚ್ಚ ನೀಡಬೇಕಾಗಿರುವ ಸದಸ್ಯರು ಆದಷ್ಟು ಬೇಗ ನೀಡಬೇಕೆಂದೂ, ಸಂಘ ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಉತ್ತಮವಾಗಿ ನಡೆಯಲು ಸಂಘಕ್ಕೆ ಉದಾರವಾಗಿ ದೇಣಿಗೆ ನೀಡಲು ಕೋರುತ್ತೇನೆ.



**ತಮ್ಮವ,**

**■ ಎಸ್. ಸೋಮಸುಂದರ**

## ಸಂಪಾದಕೀಯ

'ಬೃಹಚ್ಚರಣ' ಪತ್ರಿಕೆ ಸುಂದರವಾಗಿ, ಅರ್ಥಗರ್ಭಿತ ಲೇಖನಗಳೊಂದಿಗೆ ಬರುತ್ತಿರುವುದಕ್ಕೆ ತಮ್ಮೆಲ್ಲರ ಸಹಕಾರವೇ ಕಾರಣ. ಲೇಖನದ ಪ್ರತಿಯೊಂದನ್ನು ತಮ್ಮಲ್ಲಿಟ್ಟುಕೊಂಡು ಕಳುಹಿಸಲು ಕೋರಿಕೆ. **ರಾಜಕೀಯಕ್ಕೆ ಸಂಬಂಧಪಟ್ಟ ಲೇಖನಗಳನ್ನು ಪ್ರಕಟಿಸುವುದಿಲ್ಲ.** ಸನ್ಮಾರ್ಗದ ಹಾದಿಯಲ್ಲಿ ನಡೆದ ನಮ್ಮ ಸಮುದಾಯದ ಹಿರಿಯರ ಅಥವಾ ಯುವ ಪ್ರತಿಭೆಗಳ ಬಗ್ಗೆ ಲೇಖನಗಳನ್ನು ಕಳುಹಿಸಲು ಕೋರಿಕೆ. (ಅಗತ್ಯವಿದ್ದರೆ ಛಾಯಾಚಿತ್ರಗಳಿರಲಿ)



**ಕೆ.ಸಿ. ನಟರಾಜ್**
ಸಂಪಾದಕ

## ಅಭಿನಂದನೆ

ಸಂಘದ ಹಿತೈಷಿ ಮಾನ್ಯ ಶ್ರೀಹರಿ ಉಡುಪ ಅವರು ವಿದ್ಯಾನಿಧಿಗಾಗಿ 25,000 ರೂಪಾಯಿಗಳನ್ನು ಮತ್ತೊಮ್ಮೆ ಸಂಘಕ್ಕೆ ದೇಣಿಗೆ ನೀಡಿದ್ದು, ಸಂಘ ಕೃತಜ್ಞತೆ ಅರ್ಪಿಸುತ್ತಾ ಅವರ ಕುಟುಂಬಕ್ಕೆ ಶುಭ ಹಾರೈಸುತ್ತದೆ.

## ಸತ್ಯನಾರಾಯಣ ಪೂಜೆ ಹಾಗೂ 50 ವಸಂತಗಳ ದಾಂಪತ್ಯ ಜೀವನ ಪೂರೈಸಿದ ಹಿರಿಯ ದಂಪತಿಗಳಿಗೆ ಗೌರವ ಸಮರ್ಪಣಾ ಸಮಾರಂಭದ ವಿಶೇಷಾಂಕ



## ಸಂಘದಿಂದ ಒಂದು ದಿನದ ಪ್ರವಾಸ

ಪ್ರತಿ ವರ್ಷದಂತೆ ಈ ವರ್ಷವೂ ದಿನಾಂಕ 19.11.2017ನೇ ಭಾನುವಾರದಂದು ಒಂದು ದಿನದ ಪ್ರವಾಸವನ್ನು ಸಂಘ ಏರ್ಪಡಿಸಿದೆ. ಬೆಳಗ್ಗೆ 6.30ಕ್ಕೆ ಬೆಂಗಳೂರು ಕೆ.ಆರ್. ರಸ್ತೆಯ ದ್ವಾರಕಾನಾಥ್ ಭವನದಿಂದ ಪ್ರವಾಸ ಹೊರಡಲಾಗುವುದು.

ಪುಣ್ಯ ಕ್ಷೇತ್ರಗಳಾದ ಮುಳಬಾಗಿಲು ಆಂಜನೇಯ, ಕುರುಡುಮಲೆ ವಿನಾಯಕ, ಕೋಲಾದೇವಿ ಗರುಡ, ಆವಣಿ ಶೃಂಗೇರಿ ಮಠ, ವಿರೂಪಾಕ್ಷಿ ವಿರೂಪಾಕ್ಷ ದೇವಸ್ಥಾನಗಳನ್ನು ಸಂದರ್ಶಿಸಿ ಸಂಜೆ 8.30ಕ್ಕೆ ಬೆಂಗಳೂರು ತಲುಪವುದು.

ಪ್ರಯಾಣದ ವೆಚ್ಚ ಊಟ, ಉಪಹಾರ ಸೇರಿ ಅಂದಾಜು ಒಟ್ಟು ವೆಚ್ಚ ತಲಾ 1,000/– ಆಗಲಿದ್ದು, ಆಸಕ್ತಿಯುಳ್ಳವರು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಂಪರ್ಕಿಸಿ 10.11.2017ರ ಒಳಗಾಗಿ ನೋಂದಾಯಿಸಿಕೊಳ್ಳಲು ಮನವಿ.



**ವಿ.ಎಸ್. ಮಣಿ**
ಕಾರ್ಯದರ್ಶಿ, ಎಂ.ಎಂ.ಡಿ.ಬಿ.ಎಸ್.

## ಸಂಘದ ಸದಸ್ಯರಾಗಿ

| | |
|---|---|
| **ಮಹಾ ಪೋಷಕರು** | 25,000/– |
| **ಪೋಷಕರು** | 5,000/– |
| **ಸದಸ್ಯತ್ವ** | 1,000/– |
| **ವಾರ್ಷಿಕ ನಿರ್ವಹಣೆ** | 500/– |

## ಮೈ.ಮಂ.ದ್ರಾ.ಬ್ರೈ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

**ಕಾರ್ಯಕಾರಿ ಸಮಿತಿ : 2015–2018**

ಅಧ್ಯಕ್ಷರು
**ಎಸ್. ಸೋಮಸುಂದರ, 99001 13298**
ಉಪಾಧ್ಯಕ್ಷರು
**ಎಚ್.ಕೆ. ಶಶಿಧರ್, 98451 73766**
ಕಾರ್ಯದರ್ಶಿ
**ವಿ.ಎಸ್. ಮಣಿ, 98450 55582**
ಸಹಕಾರ್ಯದರ್ಶಿ
**ಅರುಣ್ ವಿ., 98801 66001**
ಖಜಾಂಚಿ
**ಎಸ್. ಸತ್ಯನಾರಾಯಣ, 99809 45699**
ಲೆಕ್ಕಪರಿಶೋಧಕರು
**ಎಸ್.ಸಿ. ಶ್ರೀನಿವಾಸ, 98453 76949**
ಗೌರವ ಸದಸ್ಯರು
**ಮಂಜುನಾರಾಯಣ್ ಕೆ. 98861 14279**
**ಟಿ.ಎಸ್. ಮಣಿ, 98451 76335**
**ಟಿ.ಎಸ್. ರಮೇಶನ್, 96638 74531**
**ಟಿ.ಪಿ. ಸೂರ್ಯ ನಾರಾಯಣ, 99454 84268**
**ಸರಸ್ವತಿ ನಟರಾಜನ್, 94806 19730**
**ಕೆ. ಜಿ. ವೆಂಕಟೇಶ್, 99640 12687**
**ಆರ್. ಗಣೇಶ್ ಶ್ರೀಧರ್, 9880187686**
**ಟಿ. ನಾಗೇಶ್, 99806 62118**
**ಬಿ.ಎನ್.ಜಿ. ಪ್ರಸಾದ್, 9845128229**
**ಸುಬ್ರಹ್ಮಣ್ಯಂ ಬೆಂಗಳೂರು, 94498 69667**
**ಕೆ.ಬಿ.ಎಸ್. ಶರ್ಮ, 94820 87344**
**ಅನಂತ ಕೆ.ಎಸ್. 97404 44222**
**ಶಂಕರ ಪ್ರಸಾದ್ ಬಿ.ಆರ್. 98456 63833**
**ಕೆ. ಗುಂಡಪ್ಪ, 9845332315**
**ಟಿ.ಎನ್. ರವಿಕಿರಣ್, 9972677005**
**ಸುನಿಲ್ ವಿಜಯ್‌ಕುಮಾರ್, 9986953605**


### ಅಭಿನಂದನೆ

ಸಂಘದ ಪೋಷಕ ಶ್ರೀ ಟಿ.ಎಲ್. ಚಂಪಕ ಧಾಮ್ (9972312122)ರವರು ತಮ್ಮ ಮಾತೃಶ್ರೀ ದಿ. ಲಕ್ಷ್ಮೀದೇವಮ್ಮ (ತಟ್ಟನಹಳ್ಳಿ ಲಕ್ಷ್ಮಣ ಸ್ವಾಮಿಯವರ ಪತ್ನಿ)ನವರ ಹೆಸರಿನಲ್ಲಿ ಸಂಘ ನೀಡುತ್ತಿರುವ ಪ್ರತಿಭಾ ಪುರಸ್ಕಾರಕ್ಕಾಗಿ ಪ್ರತಿವರ್ಷ 5,000/– ರೂಗಳ ದೇಣಿಗೆ ನೀಡಲು ಸಂಕಲ್ಪಿಸಿರುತ್ತಾರೆ. ಶ್ರೀಯುತರಿಗೆ ಸಂಘದ ಧನ್ಯವಾದಗಳು.

### ಸಂಘಕ್ಕೆ ಹೊಸ ಪೋಷಕ ಸದಸ್ಯರು

**ಶ್ರೀಯುತರಾದ ಎಲ್. ಪ್ರದೀಪ್ ಕುಮಾರ್ ಮತ್ತು ಜಿ. ರವಿಶಂಕರ್**

### ಹೊಸ ಸದಸ್ಯರು

**ಶ್ರೀಮತಿ ಜಯಲಕ್ಷ್ಮೀ ಎನ್. ರಾವ್ ಹಾಗೂ ಕುಮಾರಿ ಪೂಜಾ ಪ್ರಸಾದ್**

## ಅರ್ಪಣೆ 'ಕರ್ನಾಟಕ ಕಲಾಶ್ರೀ' ಆರ್. ಶಂಕರನಾರಾಯಣ್



ಆನೇಕಲ್ ತಾಲ್ಲೂಕು ರಾಚಮಾನಹಳ್ಳಿ ಶ್ರೀ ವೆಂಕಟರಾಮಯ್ಯ ಮತ್ತು ಶ್ರೀಮತಿ ರುಕ್ಮಿಣಿಯಮ್ಮ ದಂಪತಿಗಳಿಗೆ ದಿನಾಂಕ 15.02.1931ರಂದು ಶಂಕರನಾರಾಯಣ್ ಜನಿಸಿದರು. ಒಡಹುಟ್ಟಿದವರು ಅಣ್ಣ ಶ್ರೀ ನಾಗರಾಜರಾವ್, ಅಕ್ಕಂದಿರಾದ ಶ್ರೀಮತಿಯರಾದ ಸಾವಿತ್ರಮ್ಮ, ಶಾರದಮ್ಮ ಹಾಗೂ ಶಾಂತಾ ಮತ್ತು ಸುಮಿತ್ರ ತಂಗಿಯರು. ದಿನಾಂಕ 26.02.1953ರಂದು ಶ್ರೀಮತಿ ಸಣ್ಣಿ ವೆಂಕಟಲಕ್ಷ್ಮಮ್ಮ ಮತ್ತು ಶ್ರೀ ಸಣ್ಣಿ ರಾಮಯ್ಯನವರ ಹಿರಿಯ ಪುತ್ರಿಯಾದ ಇಂದಿರಾ ಅವರೊಡನೆ ವಿವಾಹ. ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ಹಿರಿಯ ಅಧಿಕಾರಿಯಾಗಿರುವ ಪುತ್ರ ಶ್ರೀ ಆರ್.ಎಸ್. ಗುರುಪ್ರಸಾದ್, ಸೊಸೆ ಶ್ರೀಮತಿ ಸುಮಾ ಪ್ರಸಾದ್, ಮೊಮ್ಮಕ್ಕಳು ಚಿ. ಪವನ್ ಕುಮಾರ್, ಚಿ. ಸಂಪದಾ ಗುರುಪ್ರಸಾದ್.

1953ರಿಂದ ಐ.ಟಿ.ಐ. ಕಾರ್ಖಾನೆಯಲ್ಲಿ ಉದ್ಯೋಗ. ಅಂತರ್ಗತವಾಗಿದ್ದ ಓದಿನ ಬಯಕೆ. ವಿವಾಹದ ನಂತರವೂ ಕನ್ನಡ ಎಂ.ಎ. ಪದವಿಯನ್ನು ಪಡೆದು ಐ.ಟಿ.ಐ. ಕಾರ್ಖಾನೆಯಲ್ಲಿ ಜನ ಸಂಪರ್ಕಾಧಿಕಾರಿಯಾಗಿ ಬಡ್ತಿಯನ್ನು ಪಡೆದರು. ನಂತರ 'ದೂರವಾಣಿ' ಮಾಸಪತ್ರಿಕೆಯ ಸಂಪಾದಕರಾದರು. ಕಾವ್ಯಗಳ ಹಾಡುಗಾರಿಕೆ, 'ಗಮಕ' ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಗುರುಗಳಾದ ಶ್ರೀಯುತ ಜಿ.ಎ. ಅನಂತ ಪದ್ಮನಾಭಯ್ಯ ಮತ್ತು 'ಗಮಕ ರತ್ನಾಕರ' ಎಂದು ಕೀರ್ತಿ ಪಡೆದಿದ್ದ ಗಮಕಿ ಎಂ. ರಾಘವೇಂದ್ರ ರಾವ್ ಅವರಲ್ಲಿ ಅಭ್ಯಾಸ ಮಾಡಿದರು. ವಿದ್ವಾನ್ ಡಾ. ಹಾವೇರಿ ಪ್ರಹ್ಲಾದಾಚಾರ್ ಅವರಲ್ಲಿ ಸಂಗೀತವನ್ನೂ ಅಭ್ಯಸಿಸಿದರು. ಗಮಕ ಪ್ರೌಢ ಪರೀಕ್ಷೆಯಲ್ಲಿ ಉನ್ನತ ಸ್ಥಾನ ಪಡೆದರು. ಶ್ರೇಷ್ಠ ಮಟ್ಟದ ಗಮಕಿಗಳಾದ ಇವರು ಕರ್ನಾಟಕದಾದ್ಯಂತ ಹಲವಾರು ವೇದಿಕೆಗಳಲ್ಲಿ ತಮ್ಮ ಕಾವ್ಯವಾಚನದ ಸೊಗಡನ್ನು ಬಿತ್ತಿದರು. ನುಡಿಯಲ್ಲಿ ಗಮಕ ಎಂಬಂತೆ ಗಮಕ ಕಲೆಗೆ ತಮ್ಮನ್ನು ತಾವು ಅರ್ಪಿಸಿಕೊಂಡರು.

ಗಮಕ ಕಲೆಯ ಬೆಳವಣಿಗೆಗಾಗಿ ತಮ್ಮ ತಂದೆಯವರ ಒತ್ತಾಸೆಯಂತೆ ಅಣ್ಣನೊಡಗೂಡಿ 1964ರಲ್ಲಿ ತಮ್ಮ ನಿವಾಸದಲ್ಲೇ 'ಕಾವ್ಯ ಪ್ರಚಾರ ಮಂಡಳಿ' ಎಂಬ ಗಮಕ ಸಂಸ್ಥೆಯನ್ನು ಪ್ರಾರಂಭಿಸಿ ಸುಮಾರು 25 ವರ್ಷಗಳ ಕಾಲ ಸಾಹಿತ್ಯ ದಾಸೋಹವನ್ನು ಸುತ್ತಮುತ್ತಲಿನ ಜನಗಳಿಗೆ ಉಣಬಡಿಸಿ, ಹಲವಾರು ಶಿಷ್ಯರನ್ನು ತಯಾರು ಮಾಡಿದರು. ತಾವು ಕಲಿಯುವುದಲ್ಲದೆ, ತಮ್ಮೊಡನಿರುವ ವ್ಯಕ್ತಿಗಳೂ ಕಲಿಯುವಂತೆ ಪ್ರೇರೇಪಣೆ ನೀಡುತ್ತಿದ್ದ ವ್ಯಕ್ತಿತ್ವ ಇವರದ್ದು. ಉದಾಹರಿಸಬೇಕೆಂದರೆ ಅವರೊಡನೆ ಎಂ.ಎ. ಪದವಿಗಳಿಸಿದ ಶ್ರೀಮತಿ ಜಿ.ಪಿ. ಲಕ್ಷ್ಮೀದೇವಿ ಅವರು ಇದಕ್ಕೆ ಸಾಕ್ಷಿ. ದೂರವಾಣಿ ನಗರದಲ್ಲಿರುವ 'ತಮಿಳು ಮಂಡ್ರಂ' ಸಂಸ್ಥೆಯಲ್ಲಿ ಕನ್ನಡ ಬೋಧಕರಾಗಿ ಸೇವೆ ಸಲ್ಲಿಸಿದರು. 'ಕನ್ನಡ ಬಾರದವರಿಗೆ ಕನ್ನಡ ಕಲಿಕೆ' ಎಂಬ ಯೋಜನೆಯ ಅಡಿಯಲ್ಲಿ 'ಕನ್ನಡ ಮತ್ತು ಸಂಸ್ಕೃತಿ' ಇಲಾಖೆಯೊಂದಿಗೆ ಕೈಜೋಡಿಸಿ ಅನ್ಯ ಭಾಷಿಗರು ಕನ್ನಡ ಕಲಿತು ಮಾತನಾಡುವಂತೆ ಮಾಡಿದ ಹೆಗ್ಗಳಿಕೆ ಇವರದ್ದು. 'ಕಾವ್ಯ ಪ್ರಚಾರ ಮಂಡಳಿ'ಯನ್ನು ನಡೆಸುವುದರೊಂದಿಗೆ ಹಲವಾರು ಕಾವ್ಯಗಳಾದ ಗಣೇಶ ಅಕ್ಷರ ಮಾಲಾ, ನವಗ್ರಹ ಸ್ತುತಿ, ಶ್ರೀ ಸತ್ಯನಾರಾಯಣ ಕಥಾಮೃತ, ಹೈಮವತಿ ಪರಿಣಯ, ಹತ್ತು ಹಲವಾರು ಪುಸ್ತಕಗಳನ್ನು ಹೊರತಂದಿದ್ದಾರೆ. ಹಿರಿಯ ಚೇತನಗಳಾದ ಪೂಜ್ಯ ಡಿ.ವಿ.ಜಿ., ಕುವೆಂಪು, ದ.ರಾ. ಬೇಂದ್ರೆ, ಪು.ತಿ.ನ., ವಿದ್ವಾನ್ ರಂಗನಾಥ ಶರ್ಮಾ, ಪ್ರೊ. ಜಿ. ವೆಂಕಟಸುಬ್ಬಯ್ಯ ಮುಂತಾದವರ ಸಂಪರ್ಕ ಇವರಿಗಿತ್ತು.

1990ರಲ್ಲಿ ನಿವೃತ್ತಿಯಾದ ನಂತರ ತಮ್ಮ ಸ್ವಗೃಹ 'ಸತ್ಯಶ್ರೀ' ಐ.ಟಿ.ಐ. ಬಡಾವಣೆ, ವಿದ್ಯಾಪೀಠ, ಬೆಂಗಳೂರು ಇಲ್ಲಿ ನಿರಂತರವಾಗಿ ಹನುಮದ್ವಿಲಾಸ, ನಳಚರಿತೆ, ಜೈಮಿನಿ ಭಾರತ ಮೊದಲಾದ ಸಮಗ್ರ ಕಾವ್ಯವಾಚನ ಕಲೆಯನ್ನು ಹಲವಾರು ವಿದ್ಯಾರ್ಥಿಗಳಿಗೆ ಧಾರೆಯೆರೆದಿರುತ್ತಾರೆ. ಇವರೊಂದಿಗೆ ವಿದ್ವಾನ್ ಟಿ. ಕೇಶವಭಟ್ಟ ಅವರು ವ್ಯಾಖ್ಯಾನ–ಗದ್ಯಪಾಠವನ್ನು ಮಾಡುತ್ತಿದ್ದರು. ಕಾವ್ಯಗಳೇ ಅಲ್ಲದೆ, ಪರಿಣಯ ಪ್ರಬಂಧ, ಸಾಹಿತ್ಯದ ಚತುರ್ಮುಖರು ಎಂಬ ಗದ್ಯ ಪುಸ್ತಕಗಳನ್ನು ಪ್ರಕಟಿಸಿದರು. ಇವರಿಗೆ 'ವಾರ್ಧಕ ಷಟ್ಪದಿ' ಕರಗತವಾಗಿತ್ತು. ಕೆಲವೊಂದನ್ನುಳಿದು ಇವರ ಕಾವ್ಯಗಳೆಲ್ಲವೂ ವಾರ್ಧಕಷಟ್ಪದಿಯಲ್ಲೇ ರಚಿತವಾಗಿದೆ. ಅಂತಹ ಕಾವ್ಯಗಳ ಮುಕುಟಮಣಿಯಾಗಿ ಇವರ ಭೀಮಸೇನ ವಿಜಯ ಮತ್ತು ಶ್ರೀ ಸೀತಾರಾಮ ದರ್ಶನಂ ಎಂಬ ಅಮೂಲ್ಯ ಲೇಖನವನ್ನು ಸಾಹಿತ್ಯ ಲೋಕಕ್ಕೆ ಕೊಟ್ಟಿದ್ದಾರೆ. 'ಪುಸ್ತಕದಾನ ಮಹಾದಾನ' ಎಂದು ನಂಬಿದ್ದ ಇವರು ತಮ್ಮ ಖರ್ಚಿನಲ್ಲೇ ಪುಸ್ತಕಗಳನ್ನು ಪ್ರಕಟಿಸಿ ಗಮಕಿಗಳಿಗೆ ಹಾಗೂ ಆಸಕ್ತ ಬಂಧು ಬಾಂಧವರಿಗೆ ಉಚಿತವಾಗಿ ಹಂಚಿರುತ್ತಾರೆ. ಈ ಮಹನೀಯರ ಗಮಕ ಕಲಾ ಸೇವೆಯನ್ನು ಗುರುತಿಸಿದ 'ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ'ಯು ಇವರಿಗೆ 'ಕರ್ನಾಟಕ ಕಲಾಶ್ರೀ' ಬಿರುದನ್ನಿತ್ತು ಸನ್ಮಾನಿಸಿದೆ. ಮೇರು ಕಲಾವಿದರೂ, ಧೀಮಂತರೂ, ಗಮಕ ಕಲೆಯ ಶಕ್ತಿಯಾಗಿದ್ದವರು 20.12.2007ರ ವೈಕುಂಠ ಏಕಾದಶಿಯಂದು ಇಹಲೋಕ ತ್ಯಜಿಸಿದರು. ಇವರ ಹೆಸರೇ ಸೂಚಿಸುವಂತೆ ಶಂಕರ ನಾರಾಯಣ ಎಂದರೆ ಶಂಕರನನ್ನು ಆರಾಧಿಸುವ ಶಿವರಾತ್ರಿಯಂದು ಜನಿಸಿದ ಇವರು ನಾರಾಯಣ ಎಂದರೆ ವೈಕುಂಠ ಏಕಾದಶಿಯಂದು ಶ್ರೀಮನ್ನಾರಾಯಣನಲ್ಲಿ ಐಕ್ಯವಾದರು.

# ಸಾಮೂಹಿಕ ಸತ್ಯನಾರಾಯಣ ಪೂಜಾ 01-10-2017

ಚಿತ್ರಕೃಪೆ : ಶಿವಕುಮಾರ್ ಎನ್.



ಕಳಶ ಪ್ರತಿಷ್ಠಾಪನೆ



ಸ್ವಾಗತಕೋರಿದ ಸದಸ್ಯರು



ಸದಸ್ಯರಿಂದ ಗಾಯನ ಸೇವೆ



ಸದಸ್ಯರಿಂದ ಗಾಯನ ಸೇವೆ



ಮಹಾ ಮಂಗಳಾರತಿ



ಮಂತ್ರಪುಷ್ಪ



ಪ್ರಸಾದ ಸ್ವೀಕರಣೆ



ಋತ್ವಿಕರಿಗೆ ಗೌರವ

# ಸತ್ಯನಾರಾಯಣ ಪೂಜೆಗೆ ಸಂಕಲ್ಪ ಮಾಡಿಸಿದ ಸದಸ್ಯರು

***ಶ್ರೀಯುತರಾದ***

ಎಸ್.ಶಿವರಾಮ್
ಆರ್.ದಿಲೀಪ್‌ಕುಮಾರ್
ಬಿ.ಶ್ರೀಧರ್
ಕೆ.ಟಿ.ನಾಗರಾಜ್
ವಿಜಯಲಕ್ಷ್ಮಿ
ಆರ್.ಭಗವಾನ್
ಆರ್.ಎಸ್.ವೆಂಕಟೇಶ್
ಆರ್.ರಾಜಲಕ್ಷ್ಮಿ
ಆರ್.ಎನ್.ಸ್ವಾಮಿನಾಥನ್
ಕೆ.ಸಿ.ನಟರಾಜನ್
ಕಲ್ಯಾಣಿ ಜಯರಾಮ್
ರವೀಂದ್ರ ಶರ್ಮ
ಎಸ್.ಆರ್.ಬಾಲಸುಬ್ರಹ್ಮಣ್ಯ
ಜಿ.ಶಿವಪ್ರಸಾದ್
ವೆಂಕಟೇಶ್ (ಆನೇಕಲ್)
ಶೋಭಾ ಕುಲಕರ್ಣಿ
ರವಿಶಂಕರ್
ಎಸ್.ವಾಸು
ಪದ್ಮನಾಭ
ಕೆ.ಮಂಜುನಾಥ
ಜಿ.ಗುರುಪ್ರಸನ್ನ
ಎಸ್.ನಿರಂಜನ್
ಡಾ|| ಭಾನುಪ್ರಕಾಶ್
ಡಾ|| ಎ.ಎನ್.ಆದಿಶೇಷನ್
ಕೆ.ಜಿ.ಸೇತುರಾಮ್
ಎನ್.ಶ್ರೀನಿವಾಸ
ವಿ.ಅರುಣ್
ಕೆ.ಜಿ.ಶ್ರೀನಿವಾಸ
ಆರ್.ಎಸ್.ಪದ್ಮನಾಭನ್
ಆರ್.ಗೋಪಾಲಕೃಷ್ಣ
ಎಸ್.ತ್ಯಾಗರಾಜ
ಎಲ್.ಪ್ರದೀಪ್‌ಕುಮಾರ್

ಹೆಚ್.ಡಿ.ಗಣೇಶ್
ಎ.ಆರ್.ಕೃಷ್ಣಶರ್ಮ
ಆರ್.ರಾಜೇಶ್ವರಿ
ಎನ್.ಚಂದ್ರಶೇಖರಯ್ಯ
ಅಂಜನ್‌ಕುಮಾರ್
ಎ.ವಿ.ಶ್ರೀನಿವಾಸ್
ಪಾರ್ವತಿ
ಆರ್.ಕಾರ್ತಿಕ್
ಆರ್.ವಿ.ಗೋಪಿನಾಥ್
ತಾರಾ ರವೀಂದ್ರ
ಎಸ್.ಆರ್.ಲತಾ
ಎ.ಆರ್.ಸುಬ್ಬರಾವ್
ಆರ್.ಎಸ್.ಭಗವಾನ್
ಬಿ.ಎನ್.ಜಿ.ಕುಮಾರ್
ಹೆಚ್.ಪಿ.ವೇಣುಗೋಪಾಲ್
ಹೆಚ್.ವಿ.ರವಿಶಂಕರ್
ವಿ.ಛಾಯಾಪತಿ
ಜಿ.ಎ.ಚಂದ್ರಶೇಖರ್
ಹೆಚ್.ಪಿ.ಶ್ರೀನಿವಾಸ್
ಹೆಚ್.ಎಸ್.ಪರಮೇಶ್ವರ್
ಕೆ.ಶಾಂತಾ
ಬಿ.ಇ.ಸಂಧ್ಯಾ
ಬಿ.ಪಿ.ವಸಂತಾ
ಎಸ್.ಸಿ.ರಾಘವಪ್ರಸಾದ್
ಶುಭಗಾಯತ್ರಿ
ಎ.ಆರ್.ಪ್ರಸಾದ್
ವಿ.ನರಸಿಂಹ
ಎಸ್.ಆರ್.ವಿಜಯಕುಮಾರ್
ಆರ್.ಜಿ.ಶೇಷಾಚಲಮ್
ಎಲ್.ಸುಧಾಶಂಕರ್
ಎನ್.ವಿ.ರಮೇಶ್
ಕೆ.ಶಾಂತಾ
ಶ್ರೀಹರಿ ಉಡುಪ

ಎ.ಈಶ್ವರನ್
ಬಿ.ಎ.ವೆಂಕಟೇಶ್‌ಮೂರ್ತಿ
ಎ.ಎಲ್.ಸುಂದರಮೂರ್ತಿ
ಆರ್.ಚಂದ್ರಮೌಳಿ
ಸಿ.ಕಾರ್ತಿಕ್
ಕೆ.ಆರ್.ಲಕ್ಷ್ಮೀನಾರಾಯಣ
ಉಮಾ ಗೋವಿಂದ್
ಕೆ.ಶ್ರೀಕಂಠೇಶ್ವರ್
ಕೆ.ಪದ್ಮಾವತಿ
ಡಾ||ಪ್ರವೀಣ್
ಎಸ್.ಪರಿಮಳ
ಹೆಚ್.ಗೋಪಾಲಸ್ವಾಮಿ
ಮಾನಸಾ ಅರವಿಂದ್
ಸಿ.ಶ್ರೀಧರ್
ಎ.ವಿ.ಚಂದ್ರಶೇಖರ್
ಆರ್.ಪಿ.ರವಿಶಂಕರ್
ಅಜೇಯ್ ರಾವ್
ಉಮಾ ಜಗದೀಶ್
ಬಿ.ಕೆ. ಶ್ರೀಧರ್ ಮೂರ್ತಿ
ಕೆ.ಎಸ್.ಶಿವಕುಮಾರ್ (ಆನೇಕಲ್)
ಆತ್ರೇಶ್ ಅಯ್ಯರ್
ಎನ್.ಅಶ್ವತ್ಥ್
ಎಸ್.ರವಿಶಂಕರ್
ಗಾಯತ್ರಿ ವಾಸುದೇವನ್
ಎಸ್.ಪ್ರಶಾಂತ್
ಪಿ.ಸುಂದರನ್
ಎಸ್.ಎನ್.ಕೃಷ್ಣಮೂರ್ತಿ
ಜಿ.ಎಸ್.ವೇಣುಗೋಪಾಲ್
ಆರ್.ಎನ್.ವೆಂಕಟಸುಬ್ಬರಾವ್
ಶ್ರೀಕಾಂತ್
ಕೆ.ಆರ್.ನಾರಾಯಣರಾವ್
ಎಸ್.ವೆಂಕಟೇಶ್
ಡಾ|| ರಮಾದೇವಿ

ಎಸ್.ಚಂದ್ರಶೇಖರ್
ಎಸ್.ರಘುನಂದನ್
ಶ್ರೀನಿವಾಸ ಆನಂದರಾವ್
ಎಸ್.ಎ.ಮಂಜುನಾಥ್
ಸಿ.ವೆಂಕಟೇಶ್
ಸಿ.ಕುಮಾರ್
ಎನ್.ವಿ.ಸುಂದರ್
ಆರ್.ಎನ್.ಮಂಜುನಾಥ್
ಟಿ.ಎನ್.ರಘು
ಆರ್.ಜಿ.ಪ್ರಸಾದ್
ಪ್ರಸಾದ್ ಗೋಪಿನಾಥ್
ಬಿ.ಪಿ.ಶ್ರೀಧರ ಮೂರ್ತಿ
ರಾಮಸ್ವರೂಪ್
ಎಂ.ಆರ್.ರವಿಶಂಕರ
ಸುನಂದಾ ರತನ್‌ಕುಮಾರ್
ನಿರ್ಮಲಾ ಸುಧೀಂದ್ರ
ಕೃಷ್ಣಮೂರ್ತಿ
ಟಿ.ಪಿ.ಸೂರ್ಯನಾರಾಯಣ
ಗಣೇಶ್ ಶ್ರೀಧರ್
ಭಾನು
ಜಗನ್ನಾಥ
ಬಿ.ಎನ್.ಕೃಷ್ಣಮೂರ್ತಿ
ಎಮ್.ಎಸ್.ಶ್ರೀಕಂಠಯ್ಯ
ಗಾಯತ್ರಿದೇವಿ ಸಾಯಿನಾಥ್
ಎನ್.ವಿ.ಗೋಪಾಲಯ್ಯ
ಆರ್.ಎಸ್.ಮಹೇಶ್
ಡಿ.ಮಂಜುನಾಥ್
ಜಿ.ಅಶೋಕ್‌ಕುಮಾರ್
ಸುಬ್ಬರತ್ನಮ್ಮ
ಸುನಂದ ಗೋವಿಂದರಾಜು
ಅಟ್ಟೂರು ರಾಮಕೃಷ್ಣಶರ್ಮ





ಪ್ರಸಾದ ಭೋಜನ ಸ್ವೀಕಾರ

# ಸತ್ಯನಾರಾಯಣ ಪೂಜಾ ವ್ರತ



ಸ್ಕಾಂದ ಪುರಾಣದ ರೇವಾಖಂಡದಲ್ಲಿ ಸತ್ಯನಾರಾಯಣ ಪೂಜೆಯ ವಿವರವನ್ನು ಉಲ್ಲೇಖಿಸ ಲಾಗಿದೆ. ಸತ್ಯನಾರಾಯಣ ಪೂಜೆಯ ವೈಶಿಷ್ಟ್ಯವನ್ನು ತಿಳಿಯಲು ಪ್ರಯತ್ನಿಸೋಣ. 'ಸತ್ಯ' ಎನ್ನುವುದು ಭಗವಂತನ ಲಕ್ಷಣಗಳಲ್ಲೊಂದು ಮತ್ತು ಸತ್ಯವು ಕಾಲ, ದೇಶ, ವಸ್ತುಗಳಿಂದ ಬದಲಾಗದೆ ಇರುವುದು. 'ನಾರಾಯಣ' ಎಂಬಲ್ಲಿ 'ನಾರಾ' ಎಂದರೆ ಜ್ಞಾನ, 'ಆಯಣ' ಎಂದರೆ ಮಾರ್ಗ. ಸತ್ಯನಾರಾಯಣ ಪೂಜೆಯು ಭಗವಂತನ ಲಕ್ಷಣಗಳಾದ ಸತ್ಯ, ಜ್ಞಾನ, ಅನಂತದ ಬಗ್ಗೆ ಜ್ಞಾನ ಪೂರ್ವಕವಾಗಿ ಅರಿಯುವುದಕ್ಕೆ ಮಾನವನಿಗೆ ಸುಲಭ ಸಾಧನ.

ಸತ್ಯನಾರಾಯಣ ಪೂಜಾ ವಿಧಾನದಲ್ಲಿ ಗಣಪತಿ ಪೂಜೆ, ನವಗ್ರಹ ಆರಾಧನೆ, ಕಳಶ ಸ್ಥಾಪನೆ, ಸತ್ಯ ನಾರಾಯಣ ಆವಾಹನೆ, ದಿಕ್ಪಾಲಕ ಪೂಜೆ, ಆವರಣ ಪೂಜೆ, ಅಷ್ಟೋತ್ತರ, ಧೂಪ, ದೀಪ, ನೈವೇದ್ಯ ಮೊದಲಾದ ಷೋಡಶೋಪಚಾರ ಪೂಜೆಯ ನಂತರ ಕಥೆಯು ಐದು ಅಧ್ಯಾಯವನ್ನೊಳಗೊಂಡಿದೆ.

ಮಾನವನಿಗೆ 'ಕರ್ಮಾನುಸಾರ ಬುದ್ಧಿ: ಕರ್ಮಾನುಸಾರ ಜನ್ಮ:' ಎನ್ನುವಂತೆ ಬದುಕಿನಲ್ಲಿ ಏರು ಪೇರು, ಲಾಭನಷ್ಟ, ಸುಖದು:ಖ, ಜಯಾಪಜಯ ಇರುವುದು ಸಹಜ. ಇದರಿಂದ ಕಂಗೆಡದೆ ಸಾಮರ್ಥ್ಯ ದಿಂದ ಇವುಗಳನ್ನು ಎದುರಿಸಲು ಮನೋಸ್ಥೈರ್ಯ ಅವಶ್ಯಕ. ಇಂತಹ ಪೂಜೆ ಪುನಸ್ಕಾರಗಳಿಂದ ಮನಸ್ಸು ಪ್ರಫುಲ್ಲವಾಗಿ ಭಗವಂತನೆಡೆ ಗಮನ ಹರಿಯುತ್ತದೆ. ಇದಲ್ಲದೆ ತ್ರಿಗುಣಗಳಾದ ಸತ್ವ, ರಜೋ, ತಮೋ ಗುಣಗಳು ಅಸಮ ಮಿಶ್ರಣದಲ್ಲಿದ್ದರೂ ಸಾತ್ವಿಕ ಗುಣ ವೃದ್ಧಿಸಿಕೊಳ್ಳಲು ಇಂತಹ ಪೂಜೆ ಸಹಕರಿಸುತ್ತದೆ. ಸತ್ಯನಾರಾಯಣ ಪೂಜೆಯಲ್ಲಿ ಹಲವಾರು ವೈಶಿಷ್ಟ್ಯ ಗಳಿವೆ. ಅವುಗಳನ್ನು ಸ್ವಲ್ಪ ಅವಲೋಕಿಸೋಣ. ಯಾವ ವರ್ಗದವರೇ ಆಗಲಿ, ಯಾವುದೇ ದಿನವಾದರೂ ಇದನ್ನು ಆಚರಿಸಬಹುದು. ಹುಣ್ಣಿಮೆಯ (ಪೂರ್ಣಿಮಾ) ದಿನ ಆಚರಿಸಿದರೆ ಶ್ರೇಷ್ಠ ಎಂಬ ಮಾತಿದೆ. ಇದಕ್ಕೆ ಕಾರಣವೇನೆಂದರೆ 'ಪೂರ್ಣಮದ: ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೆ। ಪೂರ್ಣಸ್ಯ ಪೂರ್ಣ ಮಾದಾಯ ಪೂರ್ಣ ಮೇವಾವಶಿಷ್ಯತೇ।' ಎಂಬಂತೆ ಎಲ್ಲಾ ಚರಾಚರ ವಸ್ತುಗಳು ಪೂರ್ಣದಿಂದ ಬಂದು, ಪೂರ್ಣದಲ್ಲಿ ಇದ್ದು, ಪೂರ್ಣದಲ್ಲೇ ಲಯವಾಗುವುದು.

ಸತ್ಯನಾರಾಯಣ ಪೂಜೆಯ ಕ್ರಮದಲ್ಲಿ ಬರುವಂತೆ, ಯಾವುದೇ ಕಾರ್ಯವು ನಿರ್ವಿಘ್ನವಾಗಿ ನೆರವೇರಲು ಗಣೇಶನ ಆರಾಧನೆ ಮಾಡುವುದು ಮೊದಲಿನಿಂದಲೂ ಪ್ರತೀತಿಯಲ್ಲಿದೆ. ಹಾಗೆಯೇ ಯಾವುದೇ ಗ್ರಹದೋಷ ಗಳಿದ್ದರೂ ಅದನ್ನು ನಿವಾರಣೆ ಮಾಡಿಕೊಳ್ಳಲು ನವಗ್ರಹ ಆರಾಧನೆ ಅವಶ್ಯಕ. (ಹಿಂದಿನ ಸಂಚಿಕೆಯಲ್ಲಿ 'ನವಗ್ರಹ ಆರಾಧನೆ' ಬಗ್ಗೆ ಮಾಹಿತಿ ಇದೆ). ಮಾನವನ ಮೃಣ್ಮಯ ಶರೀರವನ್ನು ಪ್ರತಿನಿಧಿಸುವಂತೆ ಕಳಶ ಸ್ಥಾಪಿಸಿ ಚೈತನ್ಯ ಸಾಕಾರದಂತೆ ಲಕ್ಷ್ಮೀ ಸಮೇತ ಸತ್ಯನಾರಾಯಣ ಸ್ವಾಮಿ ಯನ್ನು ಆವಾಹನೆ ಮಾಡಿ ಪುರುಷ ಸೂಕ್ತ, ಶ್ರೀ ಸೂಕ್ತ ಪ್ರಕಾರದಲ್ಲಿ ಪಂಚಾಮೃತ ಅಭಿಷೇಕ ಮಾಡುತ್ತಾರೆ. ಎಂಟು ಆವರಣ ಪೂಜೆಯ ನಂತರ ಲಕ್ಷ್ಮೀ ನಾರಾಯಣ ಅಷ್ಟೋತ್ತರ, ಧೂಪ, ದೀಪ, ನೈವೇದ್ಯ.

ಸತ್ಯನಾರಾಯಣ ಪೂಜೆಯಲ್ಲಿ ನೈವೇದ್ಯಕ್ಕೆ ತೆಂಗಿನಕಾಯಿ, ಹಣ್ಣು ಒಳಗೊಂಡಂತೆ ಸಪಾದ ಭಕ್ಷ್ಯವು ಮುಖ್ಯವಾದುದು. ಇದಕ್ಕೆ ತುಪ್ಪ, ಬಾಳೆಹಣ್ಣು, ಹಾಲು, ಸಕ್ಕರೆ ಸಮ ಪ್ರಮಾಣದಲ್ಲಿ ಹಾಕಿ ತಯಾರಿಸುತ್ತಾರೆ. ಇದೂ ಕೂಡ ಶ್ರೀಮದ್ ಭಗವದ್ಗೀತೆಯ 'ಸಮತ್ವಂ ಯೋಗಂ ಉಚ್ಯತೆ' (2–48), ಯೋಗ: ಕರ್ಮಸು ಕೌಶಲಮ್ (2–50) ಎಂಬಂತೆ ಜ್ಞಾನದಿಂದ ಸಮತ್ವವನ್ನು ಮತ್ತು ಕರ್ಮದಲ್ಲಿ ಕುಶಲತೆಯನ್ನು ಅನುಸರಿಸಬೇಕೆಂದು ಸೂಚಿಸುತ್ತದೆ.

ಪೂಜಾ ಕಥೆಯ ಶ್ರವಣ ಬಹಳ ಮುಖ್ಯವಾದುದು. ಇಲ್ಲಿನ ಐದು ಅಧ್ಯಾಯಗಳಲ್ಲಿ ಮೊದಲನೆಯ ಅಧ್ಯಾಯದಲ್ಲಿ ಪೂಜಾ ವಿಧಾನ, ಎರಡನೆಯ ಅಧ್ಯಾಯದಲ್ಲಿ ಬಡ ಬ್ರಾಹ್ಮಣನಿಗಿದ್ದ ದಾರಿದ್ರ್ಯವು ತೊಲಗಿ ಜ್ಞಾನ ಪ್ರಾಪ್ತಿಯಾಗಿ ಮೋಕ್ಷ ಪಡೆದಿದ್ದು, ಒಬ್ಬ ಕಟ್ಟಿಗೆ ಮಾರುವವನು ಆ ಬ್ರಾಹ್ಮಣನಿಂದ ಪೂಜೆಯ ವಿಚಾರ ತಿಳಿದುಕೊಂಡು ತಾನೂ ಅದನ್ನು ಆಚರಿಸಿ ಸತ್ಯಲೋಕ ಸೇರಿದ ಕಥೆ ಇದೆ. ಮೂರನೆಯ ಅಧ್ಯಾಯದಲ್ಲಿ ಒಬ್ಬ ವೈಶ್ಯನು ಸತ್‌ಸಂಕಲ್ಪ ಮಾಡಿ ಅದು ನೆರವೇರಿದ ಮೇಲೂ ನಿರ್ಲಕ್ಷ್ಯದಿಂದ ಭಗವಂತನ ಆರಾಧನೆ ಮರೆಯುತ್ತಾನೆ. ಇದರಿಂದ ಕಳ್ಳತನದ ಆಪಾದನೆ, ವ್ಯಾಪಾರದಲ್ಲಿ ನಷ್ಟ ಹೊಂದಿ ಮನನೊಂದು ಮತ್ತು ಈ ಕಥೆಯು ನಾಲ್ಕನೆಯ ಅಧ್ಯಾಯದಲ್ಲಿ ಮುಂದುವರಿದು ಒಬ್ಬ ಸಾಧುವಿಗೆ ಸುಳ್ಳು ಹೇಳಿ ಸಂಕಷ್ಟಕ್ಕೆ ಗುರಿಯಾಗಿ ನಂತರ ಮರೆತಿದ್ದ ಸತ್ಯನಾರಾಯಣ ಪೂಜೆ ಮಾಡಿ ಅನುಗ್ರಹ ಪಡೆದ ಕಥೆ ಇದೆ. ಕೊನೆಯ ಮತ್ತು ಐದನೆಯ ಅಧ್ಯಾಯದಲ್ಲಿ ರಾಜನು ಅಧಿಕಾರದ ಮದದಿಂದ ಸತ್ಯನಾರಾಯಣ ಸ್ವಾಮಿಯ ಪ್ರಸಾದವನ್ನು ತಿರಸ್ಕರಿಸಿದ್ದರಿಂದ ಹಲವಾರು ತೊಂದರೆಗಳಿಗೊಳಗಾಗುತ್ತಾನೆ. ನಂತರ ಪೂಜಿಸಿ, ಪ್ರಸಾದ ಸ್ವೀಕರಿಸಿ ಭಗವಂತನ ಕೃಪೆಗೆ ಪಾತ್ರನಾಗುತ್ತಾನೆ. ಈ ಕಥೆಯಲ್ಲಿ ಬರುವ ನಾಲ್ಕು ವರ್ಣದವರೂ ಅಂದರೆ ಬ್ರಾಹ್ಮಣ (ಸದಾ ಪರಬ್ರಹ್ಮ ವಿಚಾರ ಚಿಂತನೆ ಮತ್ತು ಆಚರಣೆ), ಕ್ಷತ್ರಿಯ (ದೇಹ ಬಲದಿಂದ ನಿಷ್ಪಕ್ಷಪಾತವಾಗಿ ರಕ್ಷಣೆ), ವೈಶ್ಯ (ಜೀವನೋಪಾಯಕ್ಕಾಗಿ ವ್ಯಾಪಾರ), ಮತ್ತು ಶೂದ್ರ (ನಿಷ್ಕಾಮ ಕರ್ಮದಿಂದ ಸೇವೆ) ಅವರವರ ಅರ್ಹತೆಗೆ ತಕ್ಕಂತೆ ಭಗವಂತನ ಕೃಪೆಗೆ ಪಾತ್ರರಾಗುತ್ತಾರೆ. ಪ್ರಕೃತಿ ನಿಯಮದಂತೆ ಪಂಚಭೂತಗಳಾದ ಆಕಾಶ, ವಾಯು, ಅಗ್ನಿ, ಜಲ, ಮತ್ತು ಭೂಮಿಗಳಿಂದ ನಾವು ಪ್ರಸಾದ ರೂಪವಾಗಿ ಸ್ಥಳ, ಗಾಳಿ, ಬೆಂಕಿ, ನೀರು, ಮತ್ತು ದವಸ ಧಾನ್ಯ ಸ್ವೀಕರಿಸುವಂತೆ ನಮ್ಮ ಜೀವನದಲ್ಲೂ ಆಹಾರ, ವಿಹಾರ ಮತ್ತು ಇತರ ಅವಶ್ಯಕತೆಗಳನ್ನು ಪ್ರಸಾದ ರೂಪದಲ್ಲೇ ಸ್ವೀಕರಿಸಬೇಕು. ಇದು ಸತ್ಯನಾರಾಯಣ ಸ್ವಾಮಿಯ ಪ್ರಸಾದದ ಸಂಕೇತ. ಏಕೆಂದರೆ "ಅತಿ ಸರ್ವತ್ರ ವರ್ಜಯೇತ್" ಎಂಬಂತೆ ಅತಿಯಾದರೆ ಅಮೃತವೂ ವಿಷವೇ. ಲೌಕಿಕ, ಅಲೌಕಿಕ ಇಷ್ಟಾರ್ಥಗಳ ಸಿದ್ಧಿಗೆ ಆಡಂಬರ ಮುಖ್ಯವಲ್ಲ. ಶ್ರದ್ಧೆ ಮತ್ತು ಭಕ್ತಿ ಮುಖ್ಯವಾದುದು. ಇಹ–ಪರ ಸಾಧನೆಗೆ ಸತ್ಯನಾರಾಯಣ ಪೂಜೆಯು ಉತ್ತಮ ಮಾರ್ಗೋಪಾಯ.



✍ ಆರ್. ರಮೇಶ್
9886034048

# ಹಿರಿಯ ದಂಪತಿಗಳಿಗೆ 'ಗೌರವ ಸಮರ್ಪಣಾ' ಸಮಾರಂಭದ ಛಾಯಾಚಿತ್ರಗಳು









ಸನ್ಮಾನಿತರಾದ ಶ್ರೀಮತಿ ಸರಸ್ವತಮ್ಮ ಮತ್ತು ಶ್ರೀ ಸುಂದರಯ್ಯ



ಸನ್ಮಾನಿತರಾದ ಶ್ರೀಮತಿ ಸುಶೀಲಮ್ಮ ಮತ್ತು ಶ್ರೀ ಕೆ.ಟಿ. ಸಂಪಂಗಿರಾಮನ್



ಸನ್ಮಾನಿತರಾದ ಶ್ರೀಮತಿ ಸರೋಜಾ ಮತ್ತು ಶ್ರೀ ಕೆ.ಆರ್. ಲಕ್ಷ್ಮೀನಾರಾಯಣನ್



ಸನ್ಮಾನಿತರಾದ ಶ್ರೀಮತಿ ಭ್ರಮರಾ ಮತ್ತು ಶ್ರೀ ಆರ್.ವಿ. ಗೋಪಿನಾಥ್



ಸನ್ಮಾನಿತರಾದ ಶ್ರೀಮತಿ ಛಾಯಾದೇವಿ ಮತ್ತು ಶ್ರೀ ಎಸ್. ಶ್ರೀನಿವಾಸನ್



ಸನ್ಮಾನಿತರಾದ ಶ್ರೀಮತಿ ಸತ್ಯಲಕ್ಷ್ಮಿ ಮತ್ತು ಶ್ರೀ ಎ.ವಿ. ಚಂದ್ರಶೇಖರ್



ಸನ್ಮಾನಿತರಾದ ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀ ಅನಂತರಾಮ್



ಸನ್ಮಾನಿತರಾದ ಶ್ರೀಮತಿ ವಿಜಯಲಕ್ಷ್ಮಿ ಮತ್ತು ಡಾ. ಎಂ.ಎಸ್. ಶ್ರೀಕಂಠಯ್ಯ



ಸನ್ಮಾನಿತರಾದ ಶ್ರೀಮತಿ ತಂಗಮಣಿ ಮತ್ತು ಶ್ರೀ ಆರ್.ಎಸ್. ಪದ್ಮನಾಭನ್



ಸನ್ಮಾನಿತರಾದ ಶ್ರೀಮತಿ ಮನೋರಮಾ ಮತ್ತು ಶ್ರೀ ಎ.ಎಲ್. ಸುಂದರಮೂರ್ತಿ



ಸನ್ಮಾನಿತರಾದ ಶ್ರೀಮತಿ ಶಾಂತಾ ಮತ್ತು ಶ್ರೀ ಚಂಪಕಧಾಮ ಎಸ್.



ಸನ್ಮಾನಿತರಾದ ಶ್ರೀಮತಿ ಗಾಯತ್ರಿ ಮತ್ತು ಶ್ರೀ ಜಿ.ಎಸ್. ವೆಂಕಟೇಶ್



ಸನ್ಮಾನಿತರಾದ ಶ್ರೀಮತಿ ರತ್ನಾ ಮತ್ತು ಶ್ರೀ ಜಿ.ಎಸ್. ಸತ್ಯಮೂರ್ತಿ



ಸನ್ಮಾನಿತರಾದ ಶ್ರೀಮತಿ ರುಕ್ಮಿಣಿ ಮತ್ತು ಶ್ರೀ ಜಿ.ವಿ. ಸುಬ್ಬಣ್ಣ



ಸನ್ಮಾನಿತರಾದ ಶ್ರೀಮತಿ ಕಲಾವತಿ ಮತ್ತು ಡಾ. ಆದಿಶೇಷನ್



ಸನ್ಮಾನಿತರಾದ ಶ್ರೀಮತಿ ರುಕ್ಮಿಣಿ ಮತ್ತು ಶ್ರೀ ಶ್ರೀನಿವಾಸ್



ಸನ್ಮಾನಿತರಾದ ಶ್ರೀಮತಿ ಪದ್ಮ ಮತ್ತು ಶ್ರೀ ಎಸ್. ಶಿವರಾಮನ್



ಸನ್ಮಾನಿತರಾದ ಶ್ರೀಮತಿ ಪದ್ಮಾವತಮ್ಮ ಮತ್ತು ಶ್ರೀ ಅಶ್ವಥ್‌ನಾರಾಯಣ್



ಸನ್ಮಾನಿತರಾದ ಶ್ರೀಮತಿ ವಸಂತ ಮತ್ತು ಶ್ರೀ ಎಂ.ಪಿ. ರಂಗನಾಥನ್



ಸನ್ಮಾನಿತರಾದ ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ವೆಂಕಟಸುಬ್ಬಯ್ಯ



ಸನ್ಮಾನಿತರಾದ ಶ್ರೀಮತಿ ಸುಮಿತ್ರಮ್ಮ ಮತ್ತು ಶ್ರೀ ಅನಂತಕೃಷ್ಣ



ಸನ್ಮಾನಿತರಾದ ಶ್ರೀಮತಿ ಸುಬ್ಬಲಕ್ಷ್ಮಿ ಮತ್ತು ಶ್ರೀ ಗೋಪಾಲಸ್ವಾಮಿ



ಸನ್ಮಾನಿತರಾದ ಶ್ರೀಮತಿ ಸುವರ್ಣ ಮತ್ತು ಶ್ರೀ ರಾಮಮೂರ್ತಿ



ಪ್ರಸಾದ ಭೋಜನ





ಮಲ್ಲಿಕಾರ್ಜುನ ದೇವಾಲಯದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ನಾರಾಯಣಸ್ವಾಮಿ ಹಾಗೂ ಮಲ್ಲಿಕಾರ್ಜುನ (ರಾಜಣ್ಣ)ರವರಿಗೆ ಸಂಘದಿಂದ ಗೌರವ ಸಮರ್ಪಣೆ

# ವಿಶದ ವಿಶೇಷದ ‘ದಾಂಪತ್ಯ ಗೌರವ’

ಬೃಹಚ್ಚರಣ ಅರ್ಥಾತ್ ದೊಡ್ಡ ಪಾದ. ಎಂಗಳ್ದೆ ವಾತೆಯತೀ’ **ಪೆರಿಚರಣ** ಸಮುದಾಯ. ಇದರ ಉದ್ಧಾಮ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದಲ್ಲಿ ಬದುಕು ಜಟಕಾ ಬಂಡಿ, ವಿಧಿ ಅದರ ಸಾಹೇಬ, ಕುದುರೆ ನೀನು ನಡೆ ನೀನು ಮದುವೆಗೆ... ಇದು ಬಾಳಿನ ರೂಪು ರೇಷೆ.

ಡಿವಿಜಿ ಕುಳಿತಿರುತ್ತಿದ್ದ ಅಶ್ವತ್ಥ ಮರದ ಕಟ್ಟೆಯ ಎದುರಿನ ಭ್ರಮರಾಂಬ ಸಾನ್ನಿಧ್ಯದ ಸಭಾಭವನ ಪಾಶರದಲ್ಲಿ ಮಲ್ಲಿಕಾರ್ಜುನನ ಸ್ಥಿತ್ವದಲ್ಲಿ ತಾರೀಖು 1.10.2017ರಂದು ಜರುಗಿದ ಸರ್ವಕಾಲಿಕ ಅವಿಸ್ಮರಣೀಯ ಸಮಾರಂಭವು ‘ನಿತ್ಯ ಕಲ್ಯಾಣ ಪಚ್ಚ ತೋರಣ’ ವಾಗಿತ್ತು.

ದಂಪತಿಗಳ ಸುವರ್ಣ ವರ್ಷಗಳ ದಾಂಪತ್ಯದ ಬಾಳಿಗೊಂದು ಗೌರವ ನೀಡಿದ್ದು ಅಚ್ಚುಮೆಚ್ಚಿನಲ್ಲಿ ಅಚ್ಚುಕಟ್ಟು.

ಇದರ ಪೂರ್ವ ಶ್ರೀ ಸತ್ಯನಾರಾಯಣನ ಪೂಜೆಯನ್ನು ಸಾಮೂಹಿಕವಾಗಿ ಆಯೋಜಿಸಿದ್ದು ಅದರಲ್ಲಿ ನೂರಕ್ಕೂ ಮಿಗಿಲು ಬಾಂಧವ ಮಾನ್ಯರು ಭಾಗವಹಿಸಿ ಹೇವಿಳಂಬಿ ನಾಮ ಸಂವತ್ಸರೇ ದಕ್ಷಿಣಾಯನೇ ಶರದೃತು. ಆಶ್ವಯುಜ ಮಾಸೇ, ಶುಕ್ಲಪಕ್ಷೆ ಏಕಾದಶ್ಯೆ ಶುಭದಿತೋ, ಬೃಹಚ್ಚರಣ ಬಂಧು ಸಮೂಹಾನಾಂ ಆಯುರ್ ಆರೇಸ್ಯ, ಧನಕನಕ, ಕ್ಷೇಮ, ಸ್ಥೈರ್ಯಂ, ಚ ಕಾಮಿತಫಲ ಸಿದ್ಯರ್ಥ್ಯೇ, ಪ್ರಾತಃ 9 ಗಂಟೆಯಿಂದ 11 ಗಂಟೆಯವರೆವಿಗೆ ವೈಭವೋಪೇತವಾಗಿ ನಡೆದ ಶ್ರೀ ಲಕ್ಷ್ಮೀ ಸಹಿತ ಸತ್ಯನಾರಾಯಣ ಪೂಜೆ ನಿಜಕ್ಕೂ ಮನಮೋಹಕ. ಶ್ರೀರವರ ಪೂರ್ಣಫಲ ಸರ್ವರಿಗೂ ಸಿದ್ಧಿರಸ್ತು.

ನಂತರ ನಡೆದುದು ವಿಶಿಷ್ಟ ಸರ್ವಕಾಲಿಕ ಸ್ಮರಣೀಯ ಕಾರ್ಯ. ದಂಪತಿಗಳಿಗೆ ಸುವರ್ಣ ದಾಂಪತ್ಯದ ಗೌರವ ಸಮರ್ಪಣೆ. ಇದರಲ್ಲಿ ಸದರಿ ಲೇಖಕ ದಂಪತಿಗೂ ಒದಗಿದ ಸುಯೋಗ. ಸುವ್ಯವಸ್ಥೆಯಿಂದ ಅಚ್ಚುಕಟ್ಟಾಗಿ ಸರ್ವರ ಮೆಚ್ಚುಗೆಗೆ ಪಾತ್ರವಾದ ಕಾರ್ಯಕ್ರಮ.

ಪಂಚದಶ ವರ್ಷಗಳಿಗೂ ಅಧಿಕವಾಗಿ ಜೊತೆ ಜೊತೆಯಾಗಿ ಸಂಸಾರದ ಗಾಡಿಯ ಚಕ್ರಗಳನ್ನು ಶ್ರೀ ಲಕ್ಷ್ಮೀನಾರಾಯಣ ಸ್ವರೂಪರಿಗೆ ಮಂಜಪುತ್ತೂರು ಬೃಹಚ್ಚರಣ ಸಮುದಾಯ ಸಲ್ಲಿಸಿದ ಮಹಾಪೂಜೆ ಅವರುಗಳ ಗತಃ ಬಾಳಿನ ನೆನಪುಗಳನ್ನು ಮರುಕಳಿಸಿದ ಚೆನ್ನಿನ ನೋಟವದು. ಏಕೀಭವಿಸಿದ ತ್ರಯಗಂಟುಗಳ ಸೂತ್ರದಿಂದ ಬಂಧಿಸಲ್ಪಟ್ಟ ಆಸನಗಳು ಅವರ ನಾಮಫಲಕಗಳೊಂದಿಗೆ ಆಸೀನರಾಗಿ ವಿರಾಜಿಸಿದರು. ನಂತರ **‘ನೋಡಲ್ಲಿ ಮೆರವಣಿಗೆ ಹಿರಿಯ ದಂಪತಿಗಳಿಗೆ’** ಎನ್ನುವಂತೆ ವಾದ್ಯ ಸಮೇತ ಮಾಡಿದ ವ್ಯವಸ್ಥೆ ಹಾಗೂ ಜಯಕಾರ. ಗೌರವಾಕರದಿಂ ಸಮ್ಮಿಳಿತ ನಗೆ, ಮುಗುಳ್ನಗೆ ಮುಂತಾದ ಹಿಮ್ಮೇಳಗಳೊಂದಿಗೆ ಮದುಮಂಟಪಕ್ಕೆ ಅವರುಗಳನ್ನು ಸ್ವಾಗತಿಸಿದ್ದೂ ಅಪರೂಪದ ಸವಿ ಸವಿ ನೋಟ.

ಅವರುಗಳನ್ನು ಗೌರವಗಳೊಂದಿಗೆ ಆಸೀನರಾಗಿಸಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಪ್ರಸ್ತಾವನಾ ನುಡಿಗಳು ಕಾರ್ಯಕ್ರಮದ ಧ್ಯೇಯ ಉದ್ದೇಶಗಳನ್ನು ತಿಳಿಸಿಕೊಟ್ಟವು. ಇದು **‘ಗಿಡ ಮರದಲ್ಲಿ ಹಾರಾಡುವ ಗಿಣಿಯೇ ನುಡಿನುಡಿ ಶುಭನುಡಿ’** ಎನ್ನುವಂತಿತ್ತು.

ಪ್ರತಿ ಜೋಡಿಗೂ ಅವರ ಪ್ರವರ ಸಮೇತ ಕಾರ್ಯಕರ್ತರು ದಂಪತಿಗಳೊಂದಿಗೆ ಶಾಲು, ಮಂಗಳ ದ್ರವ್ಯ, ಬಾಗಿನದ ನಂತರ ಸಂಬಂಧ ಮಾಲೆಯ ವಿನಿಮಯ. ಅಕ್ಷತಾರೋಹ ಮುಂತಾದವು. ನಂತರದ ಬಂಧು ಬಾಂಧವರಿಂದ ಸಂತಸದ ನುಡಿಗಳು



ಸಮಾರಂಭಕ್ಕೆ ಚೆನ್ನದ ಮೆರಗು ನೀಡಿದ ಹೃದಯ ಸ್ಪರ್ಶಿಯ ಅಮೃತಘಳಿಗೆ.

ಮಾಂಗಲ್ಯ ಧಾರಣೆಯು ದಾಂಪತ್ಯಕ್ಕೆ ನಾಂದಿಯಾದರೆ, ಸಪ್ತಪದಿ ಬಾಳಿಗೊಂದು ಶಪಥ. ಮೊದಲ ರಾತ್ರಿಯಲ್ಲಿ ಮನದರಸಿ ಎಡೆಯಲ್ಲಿ ‘ಚಿನ್ನರನ್ನ’ ಎಂಬುದು ದಾಂಪತ್ಯ ಬೆಸುಗೆ. ಈ ಸಮ್ಮಿಲನ ಮುಂದೆ ಹೆಣ್ಣಿಗೊಂದು ಗಂಡು ಹೇಗೋ ಸೇರಿಕೊಂಡು, ಪ್ರೇಮ ಕಾಶ್ಮೀರದಲಿ ‘ಮತ್ತೆ ಮತ್ತೆ ಉಕ್ಕುತಿದೆ ನಿನ್ನ ಮೇಲೆ ಮೋಹ ಚಿತ್ತ ಮಧುವ ನೆಕ್ಕುತಿದೆ ದೇಹ ಕೆಳಸಿ ದೇಹ’ ಎಂಬುದು ಬದುಕಿನ ವಿಸ್ತಾರಕ್ಕೆ ಸಾರ್ಥಕತೆ ಬರುತ್ತದೆ. ಸುಮಧುರ ಸುಂದರ ಬಾಳಿಗೆ ಚೆಲುವಿನ ಚಿತ್ತಾರ ಮೂಡಿಸಿದ ಬದುಕಿಗೆ ಏರಿಳಿತಗಳ ಪರಿಯಾಗಿ ‘ರಸವೇ ಜೀವನ, ವಿರಸವೇ ಮರಣ, ಸಮರಸವೇ ಜೀವನ’ ಇಂದು ತಾವು ನೀಡಿದ ಈ ಗೌರವ ಸರ್ವದಂಪತಿಗಳಲ್ಲಿ ‘ಶಾಮಸುಂದರ’ನ ಕಂಡು ಮಾರು ಹೋದಳು ರಾಧೆ ಧಾರೆ ಧಾರೆಯಾಗಿ ಹರಿಯಿತು ಆನಂದದ ಪನ್ನೀರು’ ಹೊಳೆಯಲ್ಲಿ ಈ ಜಾಡುವಂತೆ ಮಾಡಿ ಧನ್ಯರೆನಿಸಿದಿರಿ. ಇಂದು ಇಲ್ಲಿ ಬರಲಾಗದ ಜೋಡಿಗಳಿಗೆ ಅವರ ಮನೆಯಲ್ಲಿ ಗೌರವಿಸುವುದು ಸೂಕ್ತ.

ಸಮಾರಂಭದ ವಿನ್ಯಾಸ, ವಿಕಸತೆ, ಪ್ರಾಯೋಜನೆ, ಸಂಯೋಜನೆ, ಆಯೋಜನೆ, ವಿತರಣೆ, ಎಲ್ಲವೂ ಸಂಪೂರ್ಣ ಚೊಕ್ಕ–ಚೊಕ್ಕ. ಈ ಯಶಸ್ವಿ ಕಾರ್ಯದಲ್ಲಿ ಸಂಸ್ಥೆಯ ಆಡಳಿತ ವರ್ಗ, ಕಾರ್ಯಕಾರಿ ಮಂಡಳಿ, ಕಾರ್ಯಕರ್ತರು ದಕ್ಷತೆಯಿಂದ, ಶ್ರದ್ಧೆಯಿಂದ ಶ್ರಮಿಸಿ ಅವಿಸ್ಮರಣೀಯರಾಗಿರುತ್ತಾರೆ. ಸದರಿ ಮಹತ್ ಕಾರ್ಯದಲ್ಲಿ ಅವರುಗಳು ಇಟ್ಟ ಹೆಜ್ಜೆಗಳು ಒಂದು ದೊಡ್ಡ ಮಲ್ಲಿಗೆ. ಅದರ ಕಂಪು ಬಹು ಕಾಲ ನಮ್ಮ ಮನದಲ್ಲಿ ಸ್ಥಿರ. ಪರಿಪೂರ್ಣತೆ, ತನ್ಮಯತೆ, ಚಟುವಟಿಕೆಗಳಿಗೆ ಪ್ರಣಾಮಗಳು.

ವೈಶಿಷ್ಟ್ಯತೆಯಿಂದ ವಿಶದ ವಿಶೇಷವಾಗಿ ಸರ್ವಾಂಗ ಸುಂದರವಾಗಿ ಬಂದು ಇನ್ನೂ ಇಂತಹ ಅನೇಕ ಕಾರ್ಯಗಳು ಸಂಸ್ಥೆಯಿಂದ ಬರಲಿ ಎಂಬುವ ಆಶಯದಿಂ

**‘ಲೋಕಾ ಸಮಸ್ತ ಸನ್ಮಂಗಳಾನಿ ಭವಂತು, ಸರ್ವೇ ಜನಾನಾಂ ಸುಖಿನೋಭವಂತು.’**

ಜಿ.ಎಸ್. ಸತ್ಯಮೂರ್ತಿ
080–26781974

# ಸತ್ಯನಾರಾಯಣ ಪೂಜೆ ಹಾಗೂ 50 ವರ್ಷ ದಾಂಪತ್ಯ ಪೂರೈಸಿದ ಹಿರಿಯ ದಂಪತಿಗಳ ಗೌರವ ಸಮರ್ಪಣಾ ಸಮಾರಂಭದ ಬಗ್ಗೆ ಅನಿಸಿಕೆಗಳು




1.10.2017 ಭಾನುವಾರ ಮಂಜಪತ್ತೂರು ಬೃಹಚ್ಚರಣ ಸಂಘದ ವತಿಯಿಂದ 50 ಸಂವತ್ಸರ ಗೃಹಸ್ಥಾಶ್ರಮ ನಡೆಸಿದ ಹಿರಿಯ ದಂಪತಿಗಳಿಗೆ ಸನ್ಮಾನ ಸಮಾರಂಭ ಅದ್ದೂರಿಯಾಗಿ ನಡೆಯಿತು. ಭಾಗವಹಿಸಿದ ನಾವು ನಮ್ಮ ಸ್ವಂತ ಅನಿಸಿಕೆ ಆತ್ಮೀಯರಲ್ಲಿ ಹಂಚಿಕೊಳ್ಳುವ ಆಸೆಯಿಂದ ಈ ಲೇಖನ. ತಂದೆ ತಾಯಿ ಒಡಹುಟ್ಟಿದವರು ವಿವಾಹ ಮಾಡುತ್ತಾರೆ. ಅದು ಅವರ ಕರ್ತವ್ಯ ಕೂಡಾ. ಆದರೆ ನಮ್ಮ ಸ್ವಜನ ಸೇರಿ ಸಂಘದಿಂದ ಮಾಡಿದ ಇಂತಹ ಕಾರ್ಯಕ್ರಮ ಅದ್ಬುತ. ಆನಂದ, ಈ ವಿಶಾಲ ಮನೋಭಾವ ಅನುಕರಣೀಯ. ಅವರ ಹಸನ್ಮುಖದ ಸ್ವಾಗತದ ತರಂಗವೇ ಸಂತೋಷ ನೀಡಿತು. ಪ್ರಾತಃಕಾಲ 'ಶ್ರೀ ಸತ್ಯನಾರಾಯಣ' ಸ್ವಾಮಿಯ ಪೂಜಾ ಕೈಂಕರ್ಯ. ದೈವ ಸನ್ನಿಧಾನ, ಅಲಂಕಾರ, ಮಂತ್ರ ಘೋಷ, ಸಭೆಯ ಕಲರವ, ಆಪ್ತ ಬಂಧುವರ್ಗದ ಸಮಾಗಮ, ಎಲ್ಲವೂ ಹರ್ಷ ತರುತ್ತಿತ್ತು. ಉಪಹಾರ, ಕಾಫಿ ಸೇವನೆ ನಂತರ ದಂಪತಿಗಳಿಗೆ ಪ್ರತ್ಯೇಕ ಆಸನ ವ್ಯವಸ್ಥೆ. ಹೇಗೆ ಜೋಡಿಗಳನ್ನು ಕರೆದರೋ ಹಾಗೆ ಜೋಡಿ ಕುರ್ಚಿಗಳಿಗೆ ಮೂರು ಗಂಟು ಹಾಕಿ ಆಸನಕ್ಕೂ ನಾಮಫಲಕ ಅಂಟಿಸಿದ್ದರು. ಮಂಗಳ ವಾದ್ಯದೊಡನೆ ಮೆರವಣಿಗೆಯೊಡನೆ ಬಂದು ದಂಪತಿಗಳು ಆಸೀನರಾದರು. ಪೂಜಾ, ಮಂತ್ರಘೋಷ, ಸ್ವಾಮಿಯ ಕಥೆ ನಡೆಯಿತು. ಭಕ್ತಿ ಗಾಯನ, ಭಜನೆ ನಂತರ ಶ್ರೀ ಮಣಿಯವರು ಸಂಘದ ಸಾಧನೆ, ಉದ್ದೇಶ ಮತ್ತು ಪ್ರತಿ ವರ್ಷವೂ ಹೊಸ ಹೊಸ ಯೋಜನೆಗಳಿಗೆ ಬಂಧುಗಳ ಸಹಕಾರ, ಸಲಹೆ, ಅಭಿವೃದ್ಧಿಗೆ ಬೇಕಾದ ವಿಚಾರಗಳನ್ನು ಸೂಕ್ಷ್ಮವಾಗಿ ತಿಳಿಯಪಡಿಸಿದರು. ಮುಖ್ಯವಾಗಿ ಈ ಮಾನವೀಯ ಸಂಬಂಧ ಗಟ್ಟಿಯಾಗಲು ಈ ಯೋಜನೆಗಳಿಂದ ಪರಸ್ಪರ ಭಾವನೆ, ಅನಿಸಿಕೆಗಳು, ವಿನಿಮಯ ಹೆಚ್ಚು ಪ್ರಯೋಜನವೆಂದು ತಿಳಿಸಿದರು. ಶ್ರೀ ಸೋಮಸುಂದರಂ ಪೆರಿಚರಣ ತಮಿಳಿನಲ್ಲಿ ಮಾತಾಡಿದರು. ಆಸೀನರಾದ ಸನ್ಮಾನಿತ ಜೋಡಿಗಳ ಕಿರು ಪರಿಚಯ ಮಾಡಿ ಹಿರಿಯ ದಂಪತಿಗಳಿಗೆ ಕಾರ್ಯಕಾರಿ ಸಮಿತಿ ಸದಸ್ಯ ದಂಪತಿಗಳು ಮುತ್ತಿನಹಾರ ಹಾಕಿಸಿ ಮಂಗಳದ್ರವ್ಯ, ಪುಷ್ಪ, ಶಾಲು, ಫಲ, ಜೋಡಿ ದೀಪಸ್ತಂಭ ಅದನ್ನು ಇಡಲು ಬೇಕಾದ ಚೀಲ ಎಲ್ಲಾ ನೀಡಿ, ಸಂತೋಷದಿ ಆಶೀರ್ವಾದ ಪಡೆದರು. ಸಮಾರಂಭದಲ್ಲಿ ಸಂಭ್ರಮ, ಸಂತೋಷ, ಪರಸ್ಪರ ನಲ್ಮೆಯ ನುಡಿ ಹಾಗೂ ಓಡಾಟವಿತ್ತು. ನಂತರ ಅಚ್ಚುಕಟ್ಟಾದ ಭೋಜನ ವ್ಯವಸ್ಥೆ. ಅಲ್ಲೂ ಜೋಡಿಗಳಿಗೆ ಜೋಡಿ ಕುರ್ಚಿ, ನಾಮಫಲಕ ಹಾಕಿ ಶಿಸ್ತಿನ ವ್ಯವಸ್ಥೆ ಮಾಡಿದ್ದರು. ಬಂಧುಗಳಿಗೆ ಮತ್ತೊಂದು ಕಡೆ ಏರ್ಪಾಡು ಮಾಡಿದ್ದರು. ಕೋಸಂಬರಿ, ಪಲ್ಯ, ಗೊಜ್ಜು, ಚಿತ್ರಾನ್ನ, ಪಾಯಸ, ಒಬ್ಬಟ್ಟು, ಆಂಬೋಡೆ, ಹಪ್ಪಳ ಎಲ್ಲಾ ರುಚಿ ಕಟ್ಟಾಗಿತ್ತು. (ಭಾಗವಹಿಸಿದವರಿಗೆ ದೊಡ್ಡ ಲಾಭ). ಆದರಾಮೃತವಿತ್ತು. ಪ್ರಸಾದದ ಚೀಲ ಸಿಹಿ, ಖಾರಾ ಬೂಂದಿ, ಪೂಜೆಗೆ ಕೊಟ್ಟವರಿಗೆ ಕಳಶ, ಫಲ, ವಸ್ತ್ರ ವಿತರಣೆ ನಡೆಯಿತು. ತಾಂಬೂಲ ಸ್ವೀಕಾರ, ಚೆನ್ನಾಗಿ ನಡೆದ ಸಮಾರಂಭದ ತೃಪ್ತಿ ಸಮಾಧಾನ ಎಲ್ಲರ ಮುಖದಿ ಕಾಣುತ್ತಿತ್ತು. ಇದರಲ್ಲಿ ಭಾಗವಹಿಸುವ ಪುಣ್ಯ ನಮ್ಮದಾಗಿತ್ತು. ಜನ್ಮ ಧನ್ಯವಾಯ್ತು. ಒಳ್ಳೆಯ ಕಾರ್ಯಕ್ರಮ ಎಂದು ಭಾಗವಹಿಸಿದವರು ಇದೇ ರೀತಿ ಸಹಕಾರ ಸಿಗಲಿ ಎಂದು ಮಂಡಳಿಯವರು ಬೀಳ್ಕೊಟ್ಟರು.



**ಭ್ರಮರಾ ಗೋಪಿನಾಥ್**

ಬೃಹಚ್ಚರಣ ಸಮುದಾಯವು 1.10.2017ರಂದು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಏರ್ಪಡಿಸಿದ್ದ ಸಾಮೂಹಿಕ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ಹಾಗೂ ಸಮುದಾಯದ 50 ವರ್ಷ ವೈವಾಹಿಕ ಜೀವನ ನಡೆಸಿದ ಹಿರಿಯ ದಂಪತಿಗಳಿಗೆ ಗೌರವ ಸಮರ್ಪಣಾ ಸಮಾರಂಭವು ಅಭೂತಪೂರ್ವವಾಗಿತ್ತು. ನಮ್ಮ ಕುಟುಂಬವು ಬೆಳಗ್ಗೆ 9 ಗಂಟೆಗೇ ಬಂದು ಪೂಜಾ ಸಂಕಲ್ಪದಲ್ಲಿ ಭಾಗವಹಿಸುತ್ತಿದ್ದಂತೆಯೇ ಎಲ್ಲರಿಗೂ ಉಪಹಾರ ಏರ್ಪಡಿಸಲಾಗಿತ್ತು.

ಶ್ರೀ ಸತ್ಯನಾರಾಯಣ ಪೂಜೆ ಸಾಂಗವಾಗಿ ನಡೆದದ್ದು ಕಣ್ಣಿಗೆ ಹಬ್ಬ ನೀಡಿತ್ತು. 5 ಅಧ್ಯಾಯಗಳ ಕಥೆ ಕೇಳುತ್ತಿದ್ದಂತೆಯೇ ಸಂಘದ ಸದಸ್ಯರ ದೇವರನಾಮ, ಭಜನೆ ಕುಳಿತು ಕೇಳುತ್ತಿದ್ದವರ ಮನಮುಟ್ಟಿತು. ಸಂಘದ ಹಿರಿಯ ದಂಪತಿಗಳಿಗೆ ಗೌರವ ಸಮರ್ಪಣೆ ಸಮಾರಂಭದಲ್ಲಿ ಗೌರವಾನ್ವಿತರ ಹೆಸರುಗಳನ್ನು ಆಸನಗಳ ಮೇಲೆ ನಮೂದಿಸಿದ್ದು ವ್ಯವಸ್ಥಿತವಾಗಿ ಏರ್ಪಾಡು ಮಾಡಿದ್ದು ಶ್ಲಾಘನೀಯ. ಮಹಾ ಮಂಗಳಾರತಿ ಆಗುತ್ತಿದ್ದಂತೆಯೇ ಅಧ್ಯಕ್ಷ ಶ್ರೀ ಸೋಮಸುಂದರರರವರು ನೆರೆದವರಿಗೆ ಹೂಗಳನ್ನಿತ್ತು ಭಗವಂತನಿಗೆ ಅರ್ಪಿಸಲು ಸೂಚಿಸಿದರು. ಕಾರ್ಯದರ್ಶಿ ಶ್ರೀ ಮಣಿಯವರು ಹಿರಿಯ ದಂಪತಿಗಳಿಗೆ ಪ್ರತ್ಯೇಕವಾಗಿ ಭೋಜನ ವ್ಯವಸ್ಥೆ ಮಾಡಿರುವುದಾಗಿ ತಿಳಿಸಿದರು. ಅಂತೆಯೇ ಪೂಜೆಗೆ ಭಾಗವಹಿಸಿದವರಿಗೂ ಊಟಕ್ಕೆ ಕುಳಿತಿರುವಾಗಲೇ ಪ್ರಸಾದ ವಿತರಿಸುವುದಾಗಿ ತಿಳಿಸಿದರು. ಹಿರಿಯ ದಂಪತಿಗಳ ಪರವಾಗಿ ಸಂಘದ ಸದಸ್ಯ ಶ್ರೀ ಸತ್ಯಮೂರ್ತಿಯವರು ಮಾತನಾಡಿ ತಮ್ಮ ಅನುಭವ, ಅನಿಸಿಕೆಗಳನ್ನು ಹಂಚಿಕೊಂಡರು. ನಂತರ ಬಂದವರಿಗೆಲ್ಲಾ ಸುಗ್ರಾಸ ಭೋಜನವು ಏರ್ಪಾಡಾಗಿತ್ತು. ಶ್ರೀ ಸತ್ಯನಾರಾಯಣ ಪೂಜೆಗೆ ಸಂಕಲ್ಪ ಮಾಡಿದವರಿಗೆಲ್ಲಾ ಕಳಶ, ಪ್ರಸಾದ ವಿತರಿಸಲಾಯಿತು. ನಮ್ಮಗಳೊಂದಿಗೆ ಬೃಹಚ್ಚರಣ ಸಮುದಾಯದ ಹಿರಿಯರೂ, ಸಂಘದ ಪೋಷಕರಾದ ಶ್ರೀ ಬಿ.ಎಸ್. ಪದ್ಮನಾಭ್, ಚಿತ್ರರಂಗದ ಶ್ರೀ ಶಿವರಾಮ್, ಸೂರ್ಯನಾರಾಯಣ್‌ರವರು ಭಾಗವಹಿಸಿದ್ದು ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ನೀಡಿತ್ತು. ಈ ಸಮಾರಂಭವನ್ನು ಅಚ್ಚುಕಟ್ಟಾಗಿ, ಅಭೂತಪೂರ್ವವಾಗಿ ಏರ್ಪಡಿಸಿದ್ದ ಸಂಘದ ಎಲ್ಲಾ ಪದಾಧಿಕಾರಿಗಳು ಅಭಿನಂದನಾರ್ಹರು.





**ರಾಜಲಕ್ಷ್ಮೀ ರಾಮಕೃಷ್ಣ**
98442 15520
**ಸರ್ವಮಂಗಳಾ ಶ್ರೀನಿವಾಸ್**
9845801474

ಅಕ್ಟೋಬರ್ ಒಂದರಂದು ನಡೆದ ಸತ್ಯನಾರಾಯಣ ಪೂಜೆ ಹಾಗೂ ಐವತ್ತು ವರ್ಷ ವೈವಾಹಿಕ ಜೀವನ ಪೂರ್ಣಗೊಳಿಸಿರುವ ದಂಪತಿಗಳಿಗೆ ಗೌರವಾರ್ಪಣೆ ಕಾರ್ಯಕ್ರಮ ತುಂಬಾ ಅಚ್ಚುಕಟ್ಟಾಗಿ ಚ್ಯುತಿಯಿಲ್ಲದಂತೆ ನಡೆದದ್ದು ಎಲ್ಲರಿಗೂ ತಿಳಿದಿದೆ. ನನಗೆ ಮೆಚ್ಚುಗೆಯಾದ ಮೂರು ಅಭಿನಂದನಾರ್ಹ ಕಾರ್ಯಗಳನ್ನು ಇಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

ಐವತ್ತು ವರ್ಷ ವೈವಾಹಿಕ ಜೀವನ ಯಶಸ್ವಿಯಾಗಿ ಪೂರೈಸಿರುವ ದಂಪತಿಗಳನ್ನು ಗೌರವಿಸಿದ್ದು. ಈ ರೀತಿಯ ಆಚರಣೆಗಳು ತಮ್ಮ ತಮ್ಮ ಮನೆಯ ಮಟ್ಟಿಗೆ ನಡೆಸುವುದು ರೂಢಿ. ಆದರೆ ಸಂಘವೊಂದು ದಾಂಪತ್ಯ ಜೀವನದ ಸುವರ್ಣ ಮಹೋತ್ಸವವನ್ನು ಗುರುತಿಸಿ ಅಭಿನಂದಿಸುವುದು ವಿನೂತನ, ವಿಶೇಷವೇ ಸರಿ. ಎರಡನೆಯದು ಆ ದಿನ ಕಾರಣಾಂತರಗಳಿಂದ ಬರಲಾಗದ ದಂಪತಿಗಳ ಮನೆಗೆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಪತಿ–ಪತ್ನಿ ಸಮೇತರಾಗಿ ತೆರಳಿ ಸನ್ಮಾನವನ್ನು ನೆರವೇರಿಸಿ ಬಂದದ್ದು ಶ್ಲಾಘನೀಯ.

ಮೂರನೆಯದು, ಭಾನುವಾರದ ಕಾರ್ಯಕ್ರಮದ ಛಾಯಾಗ್ರಹಣ ಹಾಗೂ ಅದರ ವಿಡಿಯೋ ರೂಪಾಂತರ. ಸಮಿತಿಯ ಸದಸ್ಯರಾದ ಶ್ರೀ ನಟರಾಜ್ ಹಾಗೂ ಅವರ ಪುತ್ರ ಶ್ರೀ ಶಿವಕುಮಾರ್ ಅವರ ಜಂಟಿ ಕಾರ್ಯ ಇದಾಗಿದ್ದು, ಹಿಮ್ಮೇಳದಲ್ಲಿ ಶ್ರೀ ದಕ್ಷಿಣಾಮೂರ್ತಿಯವರ ವೀಣಾವಾದನ ಕರ್ಣಾಮೃತವಾಗಿತ್ತು.

ಈ ರೀತಿಯ ಕಾರ್ಯಗಳಿಂದ ಸಂಘದ ಸದಸ್ಯರು ತಮ್ಮ ಮುಂದಿನ ಪೀಳಿಗೆಯವರನ್ನೂ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು ಮತ್ತು ಅವರಲ್ಲಿರುವ ಪ್ರತಿಭೆಗಳಿಗೆ ಪ್ರೋತ್ಸಾಹ, ಅವಕಾಶ ನೀಡುವುದು ಸ್ವಾಗತಾರ್ಹ ವಿಷಯ. ಸಂಘವು ಹೀಗೆಯೇ ನವ ನವೀನ ಕಾರ್ಯಕ್ರಮಗಳನ್ನು ಆಯೋಜಿಸಿ, ಕಾರ್ಯರೂಪಕ್ಕೆ ತರಲಿ ಎಂದು ಹಾರೈಸುತ್ತೇನೆ. ಎಲ್ಲರಿಗೂ ಶುಭವಾಗಲಿ.



✍ ಶುಭ ಗಾಯತ್ರಿ
7975428019

# ದೀಪಾವಳಿ ಹಬ್ಬ

ಹಿಂದೂ ಜನಾಂಗದವರು ಭಾರತ ದೇಶದಲ್ಲಿ ಮತ್ತು ತಾವು ನೆಲೆಸಿರುವ ಹೊರ ದೇಶಗಳಲ್ಲಿ ಆಚರಿಸುವ ವರ್ಷದ ಕೊನೆಯ ಹಬ್ಬ ದೀಪಾವಳಿ. ಈ ಹಬ್ಬ ಬರುತ್ತಲೇ ಪಟಾಕಿ ಶಬ್ದ ಕೇಳುವ ಸಂದರ್ಭ ಉಂಟಾಗುತ್ತದೆ. ವರ್ಷ ಪ್ರಾರಂಭವಾದ ಸಮಯ ಬೆಳೆಗಳನ್ನು ಬೆಳೆದು ಸಂತೋಷ ಪಡೆಯುವ ಸಂಕ್ರಾಂತಿ ಹಬ್ಬ. ತದನಂತರ ಶ್ರೀರಾಮಚಂದ್ರ, ಸೀತಾದೇವಿಯನ್ನು ಪೂಜಿಸಿ ಅವರ ಕೃಪೆಯನ್ನು ಪಡೆಯುವುದು. ಮುಂದೆ ಸ್ವರ್ಣಗೌರಿ ಮತ್ತು ವಿನಾಯಕನನ್ನು ಪೂಜಿಸಿ ಅವರ ಅನುಗ್ರಹವನ್ನು ಪಡೆಯುವುದು. ನವರಾತ್ರಿ ಮತ್ತು ದಸರಾ (ಹತ್ತು ದಿನಗಳ ಪೂಜೆ ಮತ್ತು ಮೆರವಣಿಗೆ) ಜನರು ಆಚರಿಸುವ ಹಬ್ಬಗಳು. ಎಲ್ಲವೂ ಒಂದು ರೀತಿ ಎಲ್ಲ ಜನರ ಜೀವನದ ಕಷ್ಟ ಮತ್ತು ಅಶಾಂತಿಯನ್ನು ಮರೆಸುವ ಸಂದರ್ಭವಾಗಿರುತ್ತದೆ. ದೀಪಾವಳಿ ಹಬ್ಬವು ಎಲ್ಲಾ ಹಬ್ಬಗಳಿಗಿಂತ ಒಂದು ವಿಶೇಷತೆಯನ್ನು ಪಡೆದಿರುತ್ತದೆ. ಯಾಕೆಂದರೆ ಈ ಹಬ್ಬವನ್ನು ದೇಶಾದ್ಯಂತವಲ್ಲದೆ ಬೇರೆ ದೇಶಗಳಲ್ಲೂ ವಿಧವಿಧವಾಗಿ ಆಚರಿಸುತ್ತಾರೆ. ಪೌರಾಣಿಕ ಘಟನೆಯ ಸಂಬಂಧದಂತೆ, ನರಕಾಸುರ ರಾಕ್ಷಸನನ್ನು ಶ್ರೀಕೃಷ್ಣನು ಸಂಹರಿಸಿ ಜನರನ್ನು ಕಾಪಾಡಿದನೆಂದು ಆಶ್ವಯುಜ ಮಾಸ ಕೃಷ್ಣಪಕ್ಷದ ಚತುರ್ದಶಿ ದಿನ ಜನರು ಬೆಳಗ್ಗೆ ಸ್ನಾನವನ್ನು ಮಾಡಿ, ದೇವರು ಕಷ್ಟವನ್ನು ನೀಗಿ ಶುಭವನ್ನು ಕೊಡಲೆಂದು ಹಬ್ಬವನ್ನು ಆಚರಿಸುವರು. ಹಾಗೆಯೇ ಅಮಾವಾಸ್ಯೆ ದಿನ ಜನರು ಪೂರ್ವಜರನ್ನು ನೆನೆಯುವ ಒಂದು ಸಂದರ್ಭ. ಕಾರ್ತಿಕ ಮಾಸ ಶುಕ್ಲಪಕ್ಷದ ಪಾಡ್ಯದ ದಿನ ದೀಪಾವಳಿ ಒಂದು ವಿಶೇಷದ ದಿನ. ಜನರು ಮನೆಗಳನ್ನು ದೀಪದಿಂದ ಅಲಂಕರಿಸಿ ಹೊಸ ಬಟ್ಟೆಗಳನ್ನು ತೊಟ್ಟು ತಿಂಡಿಗಳನ್ನು ಎಲ್ಲರಿಗೂ ಕೊಟ್ಟು ತಮ್ಮ ಸಂತೋಷವನ್ನು ಹಂಚಿಕೊಳ್ಳುವ ಹಬ್ಬ. ಈ ವರ್ಷ ತಾರೀಖು 18ನೇ ಅಕ್ಟೋಬರ್ ನರಕ ಚತುರ್ದಶಿ; 19ನೇ ತಾರೀಖು ಅಮಾವಾಸ್ಯೆ ಮತ್ತು 20ನೇ ತಾರೀಖು ಬಲಿಪಾಡ್ಯಮಿಯನ್ನು ಆಚರಿಸಲು ಪಂಚಾಂಗ ರೀತ್ಯ ನಿರ್ಧರಿಸಲಾಗಿತ್ತು. ಹತ್ತು ಅವತಾರಗಳಲ್ಲಿ ಒಂದಾದ ವಾಮನ ಅವತಾರದಲ್ಲಿ ವಿಷ್ಣುವು ಬಲಿ ಚಕ್ರವರ್ತಿಯನ್ನು ಸೋಲಿಸಲು ಉಪಾಯದಿಂದ ತನ್ನ ಒಂದು ಕಾಲನ್ನು ಭೂಮಿಯ ಮೇಲೆ ಇಟ್ಟು, ಇನ್ನೊಂದು ಕಾಲನ್ನು ಆಕಾಶದಲ್ಲಿ ಇಟ್ಟು, ಮೂರನೆಯ ವರ ಪಡೆಯಲು ಬಲಿ ಚಕ್ರವರ್ತಿಯು ತನ್ನ ತಲೆಯ ಮೇಲೆ ಕಾಲನ್ನು ಇಡಲು ಹೇಳಿ ತನ್ನ ತ್ಯಾಗ ಬುದ್ಧಿಯನ್ನು ತೋರ್ಪಡಿಸಿಕೊಂಡನೆಂದು ಪ್ರತೀತಿಯಾಗಿದೆ. ಇನ್ನೊಂದು ವಿಶೇಷವೇನೆಂದರೆ, ಹೊಸದಾಗಿ ಮದುವೆಯಾದ ಅಳಿಯಂದಿರನ್ನು ಅತ್ತೆ ಮಾವನ ಮನೆಗೆ ಕರೆದು ಉಪಚಾರ ಮಾಡಿ ಬಳುವಳಿಯನ್ನು ಕೊಟ್ಟು ದೀಪಾವಳಿ ಹಬ್ಬವನ್ನು ಆಚರಿಸುವ ಪದ್ಧತಿ ನಮ್ಮ ದೇಶದಲ್ಲಿ ಬಹು ಕಾಲದಿಂದ ಇದೆ.

ಸಿಖ್ಖ ಧರ್ಮವನ್ನು ಪಾಲಿಸುವವರು ದೀಪಾವಳಿ ಹಬ್ಬವನ್ನು ಅವರ 6ನೇ ಗುರು ಹರ್‌ಗೋವಿಂದ್ ಸಿಂಗರ ನಂತರ ಆಚರಿಸುತ್ತಿದ್ದಾರೆ. ಜೈನರು ಕೂಡ ದೀಪಾವಳಿ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಇದಲ್ಲದೆ ವ್ಯಾಪಾರಿಗಳು ಹೊಸ ಲೆಕ್ಕಗಳ ಪುಸ್ತಕಗಳನ್ನು ದೀಪಾವಳಿಯಿಂದ ಪ್ರಾರಂಭ ಮಾಡಿ ಹಳೆಯ ಲೆಕ್ಕಗಳ ಲಾಭ–ನಷ್ಟಗಳನ್ನು ತಿಳಿದುಕೊಳ್ಳುತ್ತಾರೆ.

ದೀಪದ ಉಪಯೋಗ ಕತ್ತಲೆಯನ್ನು ಓಡಿಸುವುದಲ್ಲದೆ ಒಂದು ಶಕ್ತಿಯನ್ನು ಪಡೆದುಕೊಂಡದ್ದಾಗಿರುತ್ತದೆ. ಇದರಿಂದ ಪ್ರಪಂಚಕ್ಕೆ ನಾನಾ ಉಪಯೋಗಗಳಾಗಿವೆ. ಬಲೀಂದ್ರ ಪೂಜೆಯಿಂದಲೂ, ದೀಪ ಬೆಳಗಿಸುವುದರಿಂದಲೂ ದಾರಿದ್ರ್ಯ ಪರಿಹಾರವಾಗುತ್ತದೆಂಬ ನಂಬಿಕೆಯಿದೆ.

ಧ್ಯಾಯೇತ್ ಬಲೀಂದ್ರಂ ಜಗದೇಕನಾಥಂ ಮುಕ್ತಾ ಫಲಾಲಂಕೃತ ಸರ್ವಗಾತ್ರಮ್। ನಕ್ಷತ್ರನಾಥಾಭಮನರ್ಘ್ಯನೇಮಿಂ ಪ್ರಿಯಂ ಮುರಾರೇಃ ಕರವಾಲ ಹಸ್ತಮ್ । ಬಲೀಂದ್ರಸ್ಯ ನವಶಕ್ತಿ ಪೂಜಾಂ ಕರಿಷ್ಯೆ ॥

ಶ್ರಿಯೈ ನಮಃ। ಕ್ಷೋಣ್ಯೈ ನಮಃ। ದಯಾಯೈ ನಮಃ । ಧರ್ಮಾಯೈ ನಮಃ । ಭಗವತ್ಯೈ ನಮಃ । ಅನ್ನದೇವತಾಯೈ ನಮಃ । ಆನಂದಾಯೈ ನಮಃ । ರತ್ಯೈ ನಮಃ । ಶ್ರೇಷ್ಠಾಯೈ ನಮಃ ।

ನಮ್ಮ ಸಂಘದ ಎಲ್ಲಾ ಬಂಧುಗಳಿಗೂ ಮತ್ತು ಹಿತೈಷಿಗಳಿಗೂ ದೀಪಾವಳಿಯ ಶುಭಾಶಯಗಳು.



✍ ಎಂ.ಪಿ. ರಂಗನಾಥನ್
9480861849

# ದುರ್ಗಾ ಸಪ್ತಶತೀ - ಭಾವಾರ್ಥ



ನವರಾತ್ರಿ ಸಮಯದಲ್ಲಿ ನಮ್ಮ ದೇಶದ ಹಲವಾರು ಕಡೆಗಳಲ್ಲಿ ದುರ್ಗಾ ಸಪ್ತಶತೀ ಪಾರಾಯಣ ಮಾಡುವುದು ಕಾಲಾನುಕಾಲದಿಂದ ನಡೆದು ಬಂದಿದೆ. ದುರ್ಗಾ ಸಪ್ತಶತೀಯು ಏಳುನೂರು ಮಂತ್ರಗಳಿಂದ ಕೂಡಿದೆ. ಸಾವರ್ಣಿಕೆ ಮನ್ವಂತರದ ಮಾರ್ಕಂಡೇಯ ಪುರಾಣದಲ್ಲಿ ದೇವಿ ಮಹಾತ್ಮೆ ಎಂದು ಇದರ ಉಲ್ಲೇಖವಿದೆ. ಇಲ್ಲಿ ಉಚ್ಚರಿಸುವ ಪ್ರತಿಯೊಂದು ಅಕ್ಷರವೂ ಸ್ವಯಂದೇವಿಯೇ ಆಗಿದ್ದಾಳೆ. ದುರ್ಗಾ ಎಂದರೆ ಕೋಟೆ. ಮಾನವರಾದ ನಮಗೆ ಸಂಸಾರವೆಂಬ ಹುಟ್ಟು-ಸಾವಿನ ಚಕ್ರದಂಥ ಕೋಟೆಯನ್ನು ಬಿಡಿಸಿಕೊಂಡು ಜೀವನ್ಮುಕ್ತರಾಗಲು ಈ ಸಪ್ತಶತೀಯು ಸಾಧನಾ ಮಾರ್ಗವಾಗಿದೆ. ದುರ್ಗಮವಾದ ಭವಸಾಗರವನ್ನು ದಾಟಲು ಅಸಂಗವಾದ ನೌಕೆಯೇ ದುರ್ಗಾದೇವಿ. ಈ ಮಂತ್ರವನ್ನು ಗುರು ಮುಖೇನವೇ ಕಲಿಯುವಂತಹುದು. ಇದನ್ನು ದೋಷರಹಿತವಾಗಿ ಕಲಿತು ಶ್ರವಣ, ಮನನ, ನಿಧಿಧ್ಯಾಸನದ ಮೂಲಕ ಅನುಸಂಧಾನ ಮಾಡುವುದು ನಮ್ಮ ಜೀವನದ ಧ್ಯೇಯವಾಗಬೇಕು. ಮಂತ್ರರೂಪದಲ್ಲಿರುವ ದುರ್ಗಾ ಸಪ್ತ ಶತೀಯೂ ಮತ್ತು ಪಠ್ಯರೂಪದಲ್ಲಿರುವ ದೇವಿ ಮಹಾತ್ಮೆಯೂ ಒಂದೇ ಆಗಿದೆ.

ದುರ್ಗಾ ಸಪ್ತಶತೀಯು ಹದಿಮೂರು ಅಧ್ಯಾಯಗಳಿಂದ ಕೂಡಿದೆ. ಇದರಲ್ಲಿ ಮಧು-ಕೈಟಭ ವಧೆ, ಮಹಿಷಾಸುರ ಸೈನ್ಯ ವಧೆ, ಮಹಿಷಾಸುರ ವಧೆ, ಇಂದ್ರಾದಿ ಸ್ತುತಿ, ದೇವ್ಯಾದೂತ ಸಂವಾದ, ಧೂಮ್ರಲೋಚನ ವಧೆ, ಚಂಡ-ಮುಂಡ ವಧೆ, ರಕ್ತಬೀಜ ವಧೆ, ನಿಶುಂಭ ವಧೆ, ಶುಂಭ ವಧೆ, ನಾರಾಯಣೀ ಸ್ತುತಿ, ಫಲಸ್ತುತಿ, ಸುರಥ-ವೈಶ್ಯ ವರಪ್ರದಾನ ಎಂಬ ಅಧ್ಯಾಯಗಳಿವೆ. ಇದಲ್ಲದೆ ಪ್ರಾಧಾನಿಕ ರಹಸ್ಯ, ವೈಕೃತಿಕ ರಹಸ್ಯ, ಮತ್ತು ಮೂರ್ತಿ ರಹಸ್ಯ ಎಂಬ ಮೂರು ಅಧ್ಯಾಯಗಳು ರಹಸ್ಯತ್ರಯ ಎನಿಸಿ ಕೊಂಡಿವೆ. ಇಲ್ಲಿ ಬರುವ ರಾಕ್ಷಸರ ವಧೆಗಳ ಪ್ರಸಂಗಗಳನ್ನು ಮಾತ್ರ ನಾನು ನನ್ನ ಅರಿವಿಗೆ ಬಂದ ಮಟ್ಟಿಗೆ ಸಂಕ್ಷಿಪ್ತವಾಗಿ ತಿಳಿಸಲು ಇಚ್ಛಿಸುತ್ತೇನೆ.

ಮಧು-ಕೈಟಭ ವಧೆ ಪ್ರಸಂಗದಲ್ಲಿ ಸುರಥ ಎಂಬ ರಾಜ, ಸುಮೇಧಾ ಎಂಬ ಋಷಿ, ಸಮಾಧಿ ಎಂಬ ವೈಶ್ಯ ಪಾತ್ರಗಳಿವೆ. ಸುರಥ ಎಂದರೆ ಉತ್ತಮ ರಥ. ರಥ ಎಂಬುದು ನಮ್ಮ ಭೌತಿಕ ಶರೀರದ ಪ್ರತೀಕ. ಈ ರಥವನ್ನು ನಡೆಸುವವನು ರಥಿಕ. ರಥಿಕ ಎಂದರೆ ಆತ್ಮ ಅಥವಾ ಚೈತನ್ಯ. ಕಠೋಪನಿಷತ್ತಿನಲ್ಲಿ (1.3.3) ಈ ಮಾತು ಹೀಗೆ ಉಲ್ಲೇಖವಾಗಿದೆ

**ಆತ್ಮಾನಗ್ಂ ರಥಿನಂ ವಿದ್ಧಿ ಶರೀರಗ್ಂ ರಥಮೇವ ತು ।**

**ಬುದ್ಧಿಂತು ಸಾರಥಿಂ ವಿದ್ಧಿ ಮನ: ಪ್ರಗ್ರಹಮೇವ ಚ ॥**

ಹೀಗೆ ದೊರಕಿರುವ ಈ ಶರೀರವನ್ನು 'ಶರೀರ ಮಾಧ್ಯಮಂ ಖಲು ಧರ್ಮ ಸಾಧನಂ' ಎಂಬಂತೆ ಆತ್ಮ ಸಾಕ್ಷಾತಾರ ಪಡೆಯಲು ಸಾಧನೆಗಾಗಿ ಬಳಸಬೇಕು. ಸಮಾಧಿ ಎಂದರೆ ಸಮಯೋಗಲ್ಲಿರುವ ಧೀ(ಬುದ್ಧಿ) ಶಕ್ತಿ. ಆತ್ಮದತ್ತ ಮಾತ್ರ ಬುದ್ಧಿಯು ಕೇಂದ್ರೀಕೃತವಾಗಿರಬೇಕು. ಸುಮೇಧಾ ಎಂದರೆ ಆತ್ಮದಲ್ಲಿ ಜಿಜ್ಞಾಸೆವುಳ್ಳವರಿಗೆ ಒಳ್ಳೆಯ ಸಾಧನಾಮಾರ್ಗ ತೋರುವ ಗುರು ಪರಂಪರೆ. ಮಧು ಎಂದರೆ ಜೇನು. ಕೈಟಭ ಎಂದರೆ ಅದರ ಸವಿ ಸವಿಯುವ ಕೀಟ. ಜೇನು ಸವಿಯಬೇಕಾದರೆ ಕೀಟದಿಂದ ಕುಟುಕಿಸಿ ಕೊಳ್ಳಬೇಕು. ಸಂಸಾರದ ರುಚಿ ಸವಿಯುವ ಮಾರ್ಗದಲ್ಲಿ ಮಧ್ಯೆ ಬರುವ ತಾಪತ್ರಯಗಳಿಗೆ ಒಳಗಾಗಬೇಕಾಗುತ್ತದೆ. ಮಧು-ಕೈಟಭರು ನಮ್ಮೊಳಗಿನ ರಜೋತಮೋ ಗುಣದ ಸಂಕೇತ. ಈ ಗುಣಗಳಿಂದ ಅತೀತರಾಗಿ ಸಾತ್ವಿಕ ಗುಣ ಪೂರ್ಣರಾಗಲು ದೇವಿ ಮಹಾಕಾಳಿಯ ಅನುಗ್ರಹ ಆಗಬೇಕು. ಏಕೆಂದರೆ ಪ್ರಕೃತಿಯೇ (ಮಾಯೆಯೇ) ಮೂರು ಗುಣಗಳಿಗೆ ಕಾರಣ.

ಮಹಿಷಾಸುರ ಸೈನ್ಯ ಮತ್ತು ಮಹಿಷಾಸುರ ವಧೆ ಪ್ರಕರಣದಲ್ಲಿ ಮಹಿಷ ಎಂಬ ಕೋಣದ ಶಿರಸ್ಸುಳ್ಳ ರಕ್ಕಸ ಬರುತ್ತಾನೆ. ಆತನ ಸೈನ್ಯವು ಬಹಳ ಬಲಶಾಲಿಯುತವಾದದ್ದು. ಈತನೂ ರಜೋಗುಣ ಹೊಂದಿದವನು. ದೇವಿಯು ರಜೋರೂಪದಿಂದ ಮಹಾಲಕ್ಷ್ಮಿಯಾಗಿ ಆತನನ್ನು ಮತ್ತು ಆತನ ಸೈನ್ಯವನ್ನು ಸಂಹರಿಸುತ್ತಾಳೆ. ನಮ್ಮ ತಲೆಯಲ್ಲಿ ಹಿರಿದಾಗಿ ಹೊಕ್ಕಿರುವ ಪ್ರಾಪಂಚಿಕ ಸುಖ ಮತ್ತು ಬಯಕೆಗಳು ಆ ತಾಯಿಯಿಂದಲೇ ಸಂಹಾರ ವಾಗಬೇಕು. ಇದೇ ಮಹಿಷಾಸುರ ವಧೆಯ ಅರ್ಥ. ಧೂಮ್ರಲೋಚನ ವಧೆ ಪ್ರಕರಣದಲ್ಲಿ ದೇವಿಯ ಒಂದು ಹೂಂಕಾರದಿಂದಲೇ ರಕ್ಕಸನ ಅಂತ್ಯ ವಾಗುತ್ತದೆ. ಅಧ್ಯಾಸವನ್ನು (ತಪ್ಪು ತಿಳಿವಳಿಕೆ) ಹೋಗಲಾಡಿಸಿ ಅಂತಃ ಚಕ್ಷುವಿನಿಂದ ಆತ್ಮ ದರ್ಶನವಾಗಲು ದುರ್ಗಾ ದೇವಿಯು ಮುಕ್ತಿ ಮಾರ್ಗ ತೋರುವಳು. ಚಂಡ-ಮುಂಡ ವಧೆ ಪ್ರಕರಣದಲ್ಲಿ ರಕ್ಕಸರು ದೇವಿಯನ್ನು ಶುಂಭ-ನಿಶುಂಭರಿಗಾಗಿ ಕರೆದೊಯ್ಯಲು ಬರುತ್ತಾರೆ. ಚಂಡ ಎಂದರೆ ನಮ್ಮಲ್ಲಿರುವ ರಾಗ, ಮುಂಡ ಎಂದರೆ ದ್ವೇಷ. ಇವುಗಳನ್ನು ಅರಿಯಲು ಜಗನ್ಮಾತೆಯ ಕರುಣೆ ಅವಶ್ಯ. ಚಂಡ-ಮುಂಡರನ್ನು ವಧಿಸಿ ದೇವಿಯು ಚಾಮುಂಡಿ ಎನಿಸುತ್ತಾಳೆ. ರಕ್ತಬೀಜ ವಧೆಯಲ್ಲಿ ಬರುವ ರಕ್ತಬೀಜಾಸುರ ನೆಂದರೆ ಅನುಕ್ಷಣವೂ ನಮಗಿರುವ ಮುಗಿಯದ ಬಯಕೆಗಳ ಸರಮಾಲೆಯ ಸಂಕೇತ. ಈ ಬಯಕೆಗಳು ವಾಸನೆ, ಸಂಸ್ಕಾರಗಳಾಗಿ ಜನ್ಮಕ್ಕೆ ಕಾರಣ ವಾಗುವುದು. ಬಯಕೆಗಳು ಸಹಜ, ಆದರೆ ಅವು ನಮ್ಮನ್ನು ಆಳಬಾರದು. ನಾವು ಅವುಗಳನ್ನು ಆಳುವಂತಾಗಬೇಕು. ಬಯಕೆಯ ದಾಸರಾದರೆ ಅವು ನಮ್ಮನ್ನು ಸಂಕಷ್ಟಕ್ಕೆ ಈಡು ಮಾಡುತ್ತದೆ.

ಶುಂಭ-ನಿಶುಂಭ ವಧೆ ಪ್ರಕರಣದಲ್ಲಿ ರಾಕ್ಷಸರಾದ ಇವರು ದೇವಿಯನ್ನು ವರಿಸಲು ಇಚ್ಛಿಸುತ್ತಾರೆ. ದೇವಿಯು ಕ್ಷಣ ಮಾತ್ರದಲ್ಲಿ ರಾಕ್ಷಸರನ್ನು ಸಂಹರಿಸಬಹುದಾದರೂ, ಇವರಿಗೆ ಕೃಪೆ ಮಾಡಲು ಶಸ್ತ್ರ ಗಳಿಂದ ಯುದ್ಧ ಮಾಡಿ ಸಂಹರಿಸುತ್ತಾಳೆ. ಇಲ್ಲಿ ಶುಂಭ ಎಂದರೆ 'ನಾನು' ಎಂಬ ಅಹಂಕಾರ. ದೇಹವನ್ನೇ 'ನಾನು' ಎಂದು ತಪ್ಪು ತಿಳಿದಿರುವುದು. ನಿಶುಂಭ ಎಂದರೆ ನನಗೆ ಸಂಬಂಧಿಸಿದ್ದೆಲ್ಲಾ 'ನನ್ನದು' ಎಂಬ ಮಮಕಾರ. ಇದು ಮೋಹದ ಇನ್ನೊಂದು ರೂಪ. ಜಗಜ್ಜನನಿಯ ಮೂಲಕ ಬಂದಿರುವ ನಮಗೆ, ಅಹಂತೆ, ಮಮತೆಯನ್ನು ಬಿಡಿಸಿ ಅವಳು ನಮ್ಮನ್ನು ಅಪ್ಪುಗೆಗೆ ತೆಗೆದು ಕೊಳ್ಳುವಳು. ತ್ರಿಗುಣಗಳಿಗೆ ಬಂಧಿಸುವ ಮತ್ತು ವಿಮೋಚಿಸುವ ಎರಡೂ ಕ್ರಿಯೆಗಳಿಗೆ ಆ ದೇವಿಯೇ ಪರಾಶಕ್ತಿಯಾಗಿ ಅನುಗ್ರಹಿಸುತ್ತಾಳೆ. ಮೋಹ ಮಾಯೆಯು ಅವಳೇ, ಯೋಗ ಮಾಯೆಯೂ ಅವಳೇ.

ಇಚ್ಛಾಶಕ್ತಿಯಾದ ಸರಸ್ವತಿಯೂ, ಜ್ಞಾನಶಕ್ತಿ ಯಾದ ಮಹಾಲಕ್ಷ್ಮಿಯೂ, ಕ್ರಿಯಾಶಕ್ತಿಯಾದ ಪಾರ್ವತಿಯೂ ಮಾನವ ಕುಲದ ಪ್ರೇಯೋ ಮಾರ್ಗ ಮತ್ತು ಶ್ರೇಯೋಮಾರ್ಗಕ್ಕೆ ಬೇಕಾದ ಸಕಲವನ್ನು ಕರುಣಿಸುವವಳು ಹಾಗೂ ಸನ್ಮಾರ್ಗದತ್ತ ನಡೆಸುವವಳು.



ಲಲಿತಾ ರಮೇಶ್
9945199637

# ಮಕ್ಕಳಿಗಾಗಿ ಲೆಕ್ಕಗಳು

1. ರಾಮಣ್ಣನು ರೂ.50,000/– ಕೊಟ್ಟು ಹಸುವೊಂದನ್ನು ಕೊಂಡಿದ್ದನು. ಅವನು ಅದನ್ನು ಶೇ. 20 ಲಾಭಕ್ಕೆ ಭೀಮಣ್ಣನಿಗೆ ಮಾರಿದನು. ಭೀಮಣ್ಣನು ತಾನು ಕೊಂಡ ಬೆಲೆಗೆ ಶೇ. 20 ನಷ್ಟಕ್ಕೆ ಸೋಮಣ್ಣನಿಗೆ ಮಾರಿದ್ದಿದ್ದರೆ ರಾಮಣ್ಣನಿಗೆ ಲಾಭವಾಗುತ್ತಿತ್ತೋ ಅಥವಾ ನಷ್ಟ ವಾಗುತ್ತಿತ್ತೋ ಕಂಡುಹಿಡಿಯಿರಿ. ಅದು ಎಷ್ಟು ಶೇಕಡ ಎಂದು ತಿಳಿಸಿರಿ.
2. 1 ರಿಂದ 9ರವರೆಗಿನ ಒಂಬತ್ತು ಸಂಖ್ಯೆಗಳಲ್ಲಿ ಯಾವುದೋ ಮೂರು ಸಂಖ್ಯೆಗಳನ್ನು ಕೂಡಿದಾಗ 20 ಬರುತ್ತದೆ. ಆ ಮೂರು ಸಂಖ್ಯೆಗಳನ್ನು ಗುಣಿಸಿದಾಗ 280 ಬರುತ್ತದೆ. ಹಾಗಾದರೆ ಆ 3 ಸಂಖ್ಯೆಗಳು ಯಾವುವು?
3. ರಾಜೇಶನ ತಂದೆಗೆ ನಾಲ್ಕು ಜನ ಮಕ್ಕಳು. ಮೊದಲ ಮಗನ ಹೆಸರು ರಾಮ, ಎರಡನೆಯವನು ಲಕ್ಷ್ಮಣ, ಮೂರನೆಯವನು ಭರತ, ನಾಲ್ಕನೆಯ ಮಗನ ಹೆಸರೇನು?
4. ಸೀತ, ಗೀತ ಮತ್ತು ಲತ ಆಪ್ತ ಸ್ನೇಹಿತೆಯರು. ಒಮ್ಮೆ ಅವರು ಮೂವರೂ ತಮ್ಮಲ್ಲಿದ್ದ ಎಲ್ಲಾ ಹಣವನ್ನು ಸೇರಿಸಿ ಒಂದಿಷ್ಟು ರಿಬ್ಬನ್‌ಗಳನ್ನು ಕೊಂಡರು. ಸೀತ ಅವುಗಳಲ್ಲಿ ಅರ್ಧದಷ್ಟನ್ನು ತೆಗೆದುಕೊಂಡರೆ, ಉಳಿದವುಗಳಲ್ಲಿ ಅರ್ಧದಷ್ಟನ್ನು ಗೀತ ತೆಗೆದುಕೊಂಡಳು. ಉಳಿದ ರಿಬ್ಬನ್‌ಗಳಲ್ಲಿ ಲತ ಎರಡನೆಯ ಮೂರಷ್ಟನ್ನು ತೆಗೆದುಕೊಂಡಳು. ಅದರ ನಂತರ ಎರಡು ರಿಬ್ಬನ್ನುಗಳು ಉಳಿದಿದ್ದರೆ ಅವರು ಕೊಂಡ ರಿಬ್ಬನ್‌ಗಳ ಒಟ್ಟು ಸಂಖ್ಯೆ ಎಷ್ಟು? ಸೀತ, ಗೀತ, ಲತ ಪ್ರತಿಯೊಬ್ಬರೂ ಎಷ್ಟೆಷ್ಟು ರಿಬ್ಬನ್‌ಗಳನ್ನು ತೆಗೆದುಕೊಂಡಿದ್ದರು?
5. 5 ಬೆಕ್ಕುಗಳು 5 ಇಲಿಗಳನ್ನು ಹಿಡಿಯಲು 5 ನಿಮಿಷ ತೆಗೆದು ಕೊಂಡರೆ, 10 ಬೆಕ್ಕುಗಳು 10 ಇಲಿಗಳನ್ನು ಹಿಡಿಯಲು ಎಷ್ಟು ಸಮಯ ಬೇಕಾಗುತ್ತದೆ?

**ನಿಮ್ಮ ಉತ್ತರಗಳು**

| | | |
|---|---|---|
| 5 ಸರಿ ಇದ್ದರೆ | : | ಅತ್ಯುತ್ತಮ |
| 3–4 ಸರಿ ಇದ್ದರೆ | : | ಉತ್ತಮ |
| 1–2 ಸರಿ ಇದ್ದರೆ | : | ಮಧ್ಯಮ |
| ಒಂದೂ ಸರಿ ಇಲ್ಲದಿದ್ದರೆ | : | ಹೆಚ್ಚಿನ ಅಭ್ಯಾಸ ಅಗತ್ಯ |

**ಉತ್ತರ**

**1)** ನಷ್ಟ ಶೇ. 4 ರಷ್ಟು; **2)** 5, 7 ಮತ್ತು 8; **3)** ರಾಜೇಶ

**4)** ಒಟ್ಟು ರಿಬ್ಬನ್ನುಗಳು 24, ಸೀತ, ಗೀತ ಮತ್ತು ಲತ ತೆಗೆದುಕೊಂಡ ರಿಬ್ಬನ್‌ಗಳ ಸಂಖ್ಯೆ ಕ್ರಮವಾಗಿ 12, 6, 4; **5)** 5. 5 ನಿಮಿಷ.




ಬಿ.ಈ. ಗೋವಿಂದ್
9167762988


## 01.10.2017 ಸಮಾರಂಭದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಮೆಚ್ಚಿಗೆ ಸೂಚಿಸಿರುವ ನಮ್ಮವರು

ಶ್ರೀಧರಮೂರ್ತಿ, ಸಿ ಕುಮಾರ್, ಎಸ್.ಆರ್. ಬಾಲಸುಬ್ರಹ್ಮಣ್ಯಂ, ವಿಜಯ್ ಎಸ್.ಆರ್., ತಾರಾ ಎಸ್. ರವಿ, ಗೋವಿಂದರಾಜ, ಹೆಚ್.ಡಿ. ಗಣೇಶ್, ರತ್ನರಾವ್, ಆರ್.ಎಸ್. ರಮೇಶ್, ಛಾಯಾಪತಿ, ಸೋನಿಯಾ, ಸುಬ್ಬರಾವ್, ನಾಗಲಕ್ಷ್ಮಮ್ಮ, ಜಿ. ಸ್ವಾಮಿನಾಥ್, ಸುನಿಲ್ ವಿ., ಸತ್ಯಮೂರ್ತಿ, ಎ.ಆರ್. ಕೃಷ್ಣಶರ್ಮಾ, ಬಾಲು, ರವಿಶಂಕರ್ ಎಸ್.ಪಿ., ಅನು, ಆರ್.ಎ. ಶ್ಯಾಂಸುಂದರ್, ಟಿ.ಪಿ. ಜಗನ್ನಾಥ್, ವಿ.ಎಸ್. ಮೂರ್ತಿ

# ಸುದ್ದಿ ಮನೆ



ದಿ. 6.9.2017ರಂದು ನಾಗೇಶ್ವರ ಕ್ಷೇತ್ರ ಕಿತ್ತಿಗಾನಹಳ್ಳಿಯಲ್ಲಿ ನಡೆದ ಸಾಮೂಹಿಕ ಉಪಾಕರ್ಮ ಕಾರ್ಯಕ್ರಮವನ್ನು ಸಹೃದಯ ವಿಪ್ರ ವೃಂದವು ಹಮ್ಮಿಕೊಂಡಿತ್ತು. ಈ ಸಂದರ್ಭದಲ್ಲಿ ಹೆಚ್ಚಿನ ಬೃಹಚ್ಚರಣ ಬಂಧುಗಳು ಭಾಗವಹಿಸಿದ್ದು ಸಂತಸ ತಂದಿತು.



ಸಂಘದ ಸದಸ್ಯ ಹಾಗೂ ಖ್ಯಾತ ವನ್ಯಜೀವಿ ಛಾಯಾಗ್ರಾಹಕರಾದ ಶ್ರೀ ಶಿವಕುಮಾರ್ ನಟರಾಜ್‌ರವರು ತಮ್ಮ ಒಂದು ದಿನದ ಛಾಯಾಚಿತ್ರ ಪ್ರದರ್ಶನವನ್ನು ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ 13.8.2017 ರಂದು ಹಮ್ಮಿಕೊಂಡಿದ್ದು, ಪ್ರದರ್ಶನವನ್ನು ಬೃಹಚ್ಚರಣ ಸಮುದಾಯದ ಹಿರಿಯ ಸದಸ್ಯ ಹಾಗೂ ಚಿತ್ರರಂಗದ ಮೇರುನಟ, ನಿರ್ಮಾಪಕ ಶ್ರೀ ಎಸ್. ಶಿವರಾಮ್, ಬೃಹಚ್ಚರಣ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಸೋಮಸುಂದರ ಹಾಗೂ ರಾಮನಗರ ಜಿಲ್ಲಾಧಿಕಾರಿ ಡಾ. ಮಮತಾ ಐ.ಎ.ಎಸ್.,ರವರು ಉದ್ಘಾಟಿಸಿದರು. ಸಮುದಾಯದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪ್ರದರ್ಶನ ವೀಕ್ಷಿಸಿದ್ದು ಸಂತಸ ತಂದಿತು.

## ಸಂಘದ ಶುಭಾಶಯಗಳು

ಸಂಘದ ಸದಸ್ಯ ಶ್ರೀ ಸುಬ್ರಹ್ಮಣ್ಯ ಮತ್ತು ಶ್ರೀಮತಿ ಶಾಂತಲಕ್ಷ್ಮಿ ಅವರ ಪುತ್ರಿ ಚಿ.ಸೌ. ಸಹನ ಎಸ್. ಅವರ ವಿವಾಹವು ಶ್ರೀಮತಿ ಲತಾ ಮತ್ತು ಶ್ರೀ ಆರ್.ಎಸ್.ಎಸ್. ಮೂರ್ತಿ ಅವರ ಪುತ್ರ ಚಿ.ಎಸ್. ಸುಪ್ರೀತ್ ಅವರೊಂದಿಗೆ 1.10.2017ರಂದು ಬೆಂಗಳೂರಿನಲ್ಲಿ ನೆರವೇರಿತು.

* * *

ಸಂಘದ ಪೋಷಕ ಮತ್ತು ಹಿತೈಷಿ ಡಾ. ಜಿ. ಸ್ವಾಮಿನಾಥ್ ಮತ್ತು ಶ್ರೀಮತಿ ಎಸ್. ವಸುಧಾ ಅವರ ಪುತ್ರಿ ಚಿ.ಸೌ. ಎಸ್. ಶರ್ಮದಾ ಅವರ ವಿವಾಹವು ಶ್ರೀಮತಿ ನಾಗರತ್ನಮ್ಮ ಮತ್ತು ಶ್ರೀ ರಾಮಚಂದ್ರರಾವ್ ಅವರ ಪುತ್ರ ಚಿ. ಅರವಿಂದ ಕರಣಂ ಅವರೊಂದಿಗೆ 17.8.2017ರಂದು ಬೆಂಗಳೂರಿನಲ್ಲಿ ನೆರವೇರಿತು.

# ಮಂಕುತಿಮ್ಮನ ಕಗ್ಗ

**ಇಳೆಯಿಂದ ಮೊಳಕೆಯಾಗವಂದು ತಮಟೆಗಳಿಲ್ಲ**
**ಫಲ ಮಾಗುವಂದು ತುತ್ತೂರಿ ದನಿಯಿಲ್ಲ**
**ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ**
**ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ**

"ಸರ್ವೇ ಜನಾಃ ಸುಖಿನೋಭವಂತು, ಸಮಸ್ತ ಸನ್ಮಂಗಳಾನಿ ಭವಂತು' ಎನ್ನುತ್ತಾ ಎಷ್ಟೋ ಜನ ಸಾಧುಗಳು, ತಪಸ್ವಿಗಳು ಲೋಕೋಪಕಾರವನ್ನು ಬಯಸಿ ಯಜ್ಞ ಯಾಗಾದಿ ಕಾರ್ಯಗಳನ್ನು ಮಾಡುತ್ತಿರುತ್ತಾರೆ. ಈ ವಿಚಾರದಲ್ಲಿ ಹರಿ ಹರರೂ ಹೊರತಲ್ಲ. ದೇವಾ ಸುರರು ಕ್ಷೀರ ಸಮುದ್ರವನ್ನು ಕಡೆದಾಗ ಮೊಟ್ಟ ಮೊದಲು ಹಾಲಾಹಲ ಉದ್ಭವವಾಯಿತು. ಆ ವಿಷದ ಗಾಳಿಯಿಂದಲೇ ಅನೇಕರು ಮರಣ ಹೊಂದಿದರು. ಇದರಿಂದ ಲೋಕಕ್ಕೆ ಕೆಡಕಾಗುತ್ತದೆಂಬುದನ್ನು ತಿಳಿದು ತ್ರಿಮೂರ್ತಿಗಳಲ್ಲಿ ಒಬ್ಬನಾದ ಹರನು ಲೋಕ ಕಲ್ಯಾಣಕ್ಕೋಸ್ಕರ ಆ ಹಾಲಾಹಲವನ್ನು ಕುಡಿದು ನೀಲಕಂಠನಾದ. ನಂತರ ತಾರಕಾಸುರ ನೆಂಬ ರಕ್ಕಸನು ದೇವತೆಗಳಿಗೆ ಉಪಟಳವನ್ನು ಮಾಡಿ ತೊಂದರೆ ನೀಡುತ್ತಿದ್ದನು. ಇವನ ಮರಣ ಶಿವನ ಮಗನಾದ ಸುಬ್ರಹ್ಮಣ್ಯನಿಂದಲೇ ಸಾಧ್ಯ ಎಂದು ಗೋಚರವಾಯಿತು. ಆದರೆ ಈಶ್ವರ ಘೋರ ತಪಸ್ಸನ್ನು ಮಾಡುತ್ತಿದ್ದ. ಆ ತಪಸ್ಸು ಭಂಗವಾಗಬೇಕು. ಆದರೆ ಆ ರುದ್ರನನ್ನು ಯಾರು ತಪಸ್ಸಿನಿಂದ ವಿಚಲಿತ ಮಾಡಲು ಅರ್ಹರಾಗಿದ್ದಾರೆ ಎಂದು ಯೋಚಿಸಿ ಶ್ರೀ ಹರಿಯು ಕಡೆಗೆ ತನ್ನ ಮಗನಾದ ಮನ್ಮಥನನ್ನೇ (ಅವನ ಅಂತ್ಯವಾಗುತ್ತದೆ ಎಂದು ಅರಿತು) ಲೋಕ ಕಲ್ಯಾಣಕ್ಕೋಸ್ಕರ ತಪೋಭಂಗ ಮಾಡಲು ಕಳುಹಿಸಿದ.

ಅದರಂತೆಯೇ ಪ್ರಕೃತಿ ಸಹ ಲೋಕೋಪಕಾರಕ್ಕಾಗಿ ಯಾವ ಅಹಮಿಲ್ಲದೆ ಕರ್ತವ್ಯ ನಿಷ್ಠೆಯಿಂದ ಕಾರ್ಯವನ್ನು ನಡೆಸುತ್ತಾಳೆ. ಎಷ್ಟೋ ವಿಸ್ಮಯಕಾರಿ ಘಟನೆಗಳು ಪ್ರಕೃತಿಯಲ್ಲಿ ನಡೆಯುತ್ತವೆ. ಭೂಮಿಯಲ್ಲಿ ಬಿತ್ತಿದ ಬೀಜ ಮೊಳಕೆಯಾಗುವುದು ನಮಗೆ ಸಹಜವಾಗಿ ಕಂಡರೂ ಅದು ವಿಸ್ಮಯವೇ. ಆಗ ಪ್ರಕೃತಿ ಯಾವ ತಮಟೆಯನ್ನು ಬಾರಿಸಿ ಘೋಷಿಸುವುದಿಲ್ಲ. (ಫಲ ಮಾಗುವೆಂದು) ಕಾಯಿ ಹಣ್ಣಾಗು ವಾಗಲೂ ತುತ್ತೂರಿ ಊದಿ ಸಾರಿ ಸಾರಿ ಹೇಳುವುದಿಲ್ಲ. ಸೂರ್ಯ ಚಂದ್ರರು ಉದಯಿಸಿ ತಮ್ಮ ದೈನಂದಿನ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಬೆಳಕನ್ನು ನೀಡಿ ಮಾನವ ಕುಲಕ್ಕೆ ಮತ್ತು ಸಸ್ಯಕುಲಕ್ಕೆ ಲೋಕೋಪಕಾರ ಮಾಡುತ್ತಾರೆ. ಯಾವ ಸದ್ದು ಗದ್ದಲ ವಿಲ್ಲದೆ, ಯಾವ ಬಡಾಯಿಯನ್ನೂ ಕೊಚ್ಚದೆ ನಿರಂತರವಾಗಿ ಆ ಭಗವಂತನ ಆದೇಶದಂತೆ ನಡೆಯುತ್ತಾರೆ.



ಪರೋಪಕಾರಕ್ಕಾಗಿ ಹಸುಗಳು ಹಾಲನ್ನು ಕೊಡುತ್ತವೆ. ಮರಗಳು ಫಲವನ್ನು ಕೊಡುತ್ತವೆ. ಜನರ ಸುಖಕ್ಕೋಸ್ಕರ ನದಿಗಳು ಹರಿಯುತ್ತವೆ. ಪರೋಪಕಾರಾರ್ಥ ಇದಂ ಶರೀರಂ ಎಂದು ಒಂದು ಸುಭಾಷಿತವಿದೆ. ಹೀಗಿರುವಾಗ ಎಲೆ ಮನುಷ್ಯನೇ ನೀನು ಏನನ್ನಾದರೂ ಮಾಡುವ ಅಥವಾ ಮಾಡಲಿರುವ ಕಾರ್ಯಗಳ ಬಗ್ಗೆ ಬಡಾಯಿಕೊಚ್ಚಿಕೊಳ್ಳುವುದು ಬೇಡ. **"ಎಂದರೋ ಮಹಾನುಭಾವುಲು, ಅಂದರಿಕೀ ವಂದನಮುಲು"** ಎಂದು ತ್ಯಾಗರಾಜರು ತಮ್ಮ ಕೀರ್ತನೆಯಲ್ಲಿ ಹಾಡಿದ್ದಾರೆ. ನಮಗಿಂತ ಹೆಚ್ಚಿನ ಪರಿಶ್ರಮ, ಸಾಧನೆ ಮಾಡಿರುವ ಎಷ್ಟೋ ಮಹನೀಯರುಗಳಿಗೆ ವಂದನೆಯನ್ನು ಮಾಡೋಣ. ನಮಸ್ಕಾರ ಮಾಡೋಣ ಅವರ ಮುಂದೆ ತಲೆ ಬಾಗೋಣ. ಬಲಗೈಲಿ ಕೊಟ್ಟದ್ದು ಎಡಗೈಗೆ ತಿಳಿಯದಂತೆ ಎಷ್ಟೋ ಮಹಾನುಭಾವರು ಎಲೆ ಮರೆಯ ಕಾಯಿಯಂತಿದ್ದು, ಹೊಗಳಿಕೆಗೆ ವಿಮುಖರಾಗಿದ್ದಾರೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಹೇಳಿದಂತೆ "ನಿನ್ನ ಕರ್ತವ್ಯವನ್ನು ಮಾಡು ಫಲಾಪೇಕ್ಷೆ ಬೇಡ' ಎಂದರಿತು ಕರ್ಮ ಯೋಗಿಗಳಿಗಳಂತೆ ನಡೆಯುವವರು ಇದ್ದಾರೆ. ಆದುದರಿಂದ 'ಸ್ವಪ್ರಶಂಸೆಯ ಅಹಂ, ಕೀರ್ತಿಯ ಹಂಬಲ ಇರತಕ್ಕ ಮನುಷ್ಯನೇ ಹೊಲಿ ನಿನ್ನ ತುಟಿಗಳನ್ನು ಇಲ್ಲದಿದ್ದರೆ ನಿನ್ನ ಜೀವನ ಹಾಸ್ಯಾಸ್ಪದವಾಗುತ್ತದೆ ಎಂದಿದ್ದಾರೆ ಪೂಜ್ಯ ಡಿ.ವಿ.ಜಿ.ಯವರು. 'ಬಾಯಿ ಮುಚ್ಚಿಕೊಂಡಿದ್ದರೆ ಲೇಸು' ಸದ್ದುಗದ್ದಲವಿಲ್ಲದೆ, ನಮ್ಮ ಕಾರ್ಯ ನಿರ್ವಹಣೆ ಮಾಡೋಣ. ಇತರರು ನಮ್ಮ ಕೆಲಸವನ್ನು ನೋಡಿ ಮೆಚ್ಚಬೇಕೇ ಹೊರತು ನಾವು ನಮ್ಮನ್ನೇ ಹೊಗಳಿಕೊಳ್ಳಕೂಡದು ಎಂದು ಬುದ್ಧಿವಾದ ಹೇಳಿದ್ದಾರೆ.

✍ ಶ್ರೀಮತಿ ಜಿ.ಪಿ. ಲಕ್ಷ್ಮೀದೇವಿ
**080–23444798**

## ಮರೆಯಾದ – ಮರೆಯಲಾಗದವರು ಸಂಘದ ಶ್ರದ್ಧಾಂಜಲಿ

**ವೆಂಕಟಕೃಷ್ಣ (63)** ಖಿಲ್ಲಾಪುರ ವೆಂಕಟರಾಮಯ್ಯನವರ ಪುತ್ರ 3.9.17

**ವಿಶಾಲಾಕ್ಷಿ,** ಕೋಂ. ಡಿ.ಎಸ್. ವಿ. ಅಯ್ಯರ್‌ರವರ ಪತ್ನಿ, 1.8.17

**ಶ್ರೀಮತಿ,** ಎಸ್. ವಿಶ್ವನಾಥ್‌ರವರ ತಾಯಿ. 15.6.17

**ಪಾರ್ವತಿ ಚಂದ್ರಶೇಖರ್ (79),**
ಕಾರ್ಯಕಾರಿ ಸದಸ್ಯ ಬಿ. ಸುಬ್ರಹ್ಮಣ್ಯಂ ಸೋದರಿ, 9.10.2017

**ರಾಜಮ್ಮ ಕಮಲನಾಭ, (78)**
ಸದಸ್ಯ ಆರ್. ದಿಲೀಪ್‌ರವರ ಅತ್ತೆ, 10.10.2017

**ಪದ್ಮಾ ಶಿವರಾಂ, (76)** ಸಂಘದ ಹಿರಿಯ ಸದಸ್ಯರಾದ
ಶ್ರೀ ಎಸ್. ಶಿವರಾಂರವರ ಪತ್ನಿ, ಹಾಗೂ ಪೋಷಕ
ಎಲ್. ಪ್ರದೀಪ್‌ಕುಮಾರ್ ಅವರ ಅತ್ತೆ 21.10.2017

**ಕಮಲಮ್ಮ ಶ್ರೀನಿವಾಸನ್, (81)** ಪೋಷಕ ಎಸ್. ತ್ಯಾಗರಾಜ್, ಎಸ್.
ನಾಗರಾಜನ್ ಅವರ ತಾಯಿ, 21.10.2017

**ಪದ್ಮಾವತಮ್ಮ, (78)** ಸಂಘದ ಮಾಜಿ ಅಧ್ಯಕ್ಷ ಶ್ರೀ ಪಟ್ಟಾಭಿ ರಾಮಯ್ಯ ರವರ ಪತ್ನಿ, ಕಾರ್ಯಕಾರಿ ಸಮಿತಿ ಸದಸ್ಯ ಟಿ.ಪಿ. ಸೂರ್ಯ ನಾರಾಯಣ, ಸದಸ್ಯ ಟಿ.ಪಿ. ಜಗನ್ನಾಥ್‌ರವರ ತಾಯಿ, 17.10.2017



ಶ್ರೀ ವೆಂಕಟಸುಬ್ಬಯ್ಯ ಶ್ರೀಮತಿ ಜಾನಕಮ್ಮ ನವರ ಪುತ್ರರಾದ ಹೊಸಕೋಟೆ **ಶ್ರೀನಿವಾಸ್,** 21.9.2017ರಂದು ನಮ್ಮನ್ನಗಲಿರುವುದು ಅತೀವ ದುಃಖತಂದಿದೆ. ಶ್ರೀಯುತರು ಸಂಘದ ಕಾರ್ಯ ಕಾರಿ ಸಮಿತಿ ಸದಸ್ಯರು ಹಾಗೂ ಸಂಘದ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಶ್ರೀನಿವಾಸ್‌ರವರು ಪತ್ನಿ ಶೈಲ ಹಾಗೂ ಮಗಳು ಶಾರ್ವರಿ ಶ್ರೀನಿವಾಸ್‌ರವರನ್ನು ಅಗಲಿರುತ್ತಾರೆ. ಇವರಿಗೆ ಶ್ರೀಯುತರ ಅಗಲಿಕೆಯ ದುಃಖ ಭರಿಸುವ ಶಕ್ತಿ ಭಗವಂತನು ಕರುಣಿಸಲಿ.

## ಸತ್ಯನಾರಾಯಣ ಪೂಜೆ ಹಾಗೂ ಹಿರಿಯ ದಂಪತಿಗಳ ಗೌರವ ಸಮಾರಂಭಕ್ಕೆ ದೇಣಿಗೆ ನೀಡಿದ ದಾನಿಗಳು

| | | | | | |
|---|---|---|---|---|---|
| ಬಿ.ವಿ.ಶೇಷಾದ್ರಿ ಮತ್ತು ಬಿ.ವಿ.ಪದ್ಮ | 10000 | ಬಿ.ಎಸ್. ಸೂರ್ಯನಾರಾಯಣ್ | 5000 | ಕೆ.ಬಿ.ಎಸ್. ಶರ್ಮ | 3000 |
| ಗಣೇಶ್‌ಕುಮಾರ್ | 10000 | ಬಿ.ಆರ್. ಶಂಕರಪ್ರಸಾದ್ | 5000 | ವಿ. ಸತೀಶ್ | 3000 |
| ಎಸ್.ವಿ.ವೈಜಯಂತಿ | 10000 | ಎಸ್.ಸಿ. ಶ್ರೀನಿವಾಸ್ | 5000 | ಕೆ. ಶ್ರೀಕಂಠೇಶ್ವರ್ | 2000 |
| ಎ.ಎಮ್. ಸುಬ್ರಹ್ಮಣ್ಯಮ್ | 6000 | ಡಾ॥ ಜಿ.ಸ್ವಾಮಿನಾಥ್ | 5000 | ದಿ॥ ಆರ್.ಎಸ್.ಅಶ್ವತ್ಥನಾರಾಯಣ | 2500 |
| ಜಿ.ಎಸ್. ವೆಂಕಟೇಶ್ | 6000 | ಎಮ್.ಪಿ. ರಂಗನಾಥನ್ | 5000 | ಎನ್.ಪ್ರಭಾಕರ್ | 2001 |
| ಆರ್.ಎಸ್. ರಮೇಶ್ | 6000 | ಎಸ್. ಸೋಮಸುಂದರ | 5000 | ಟಿ.ವಿ.ಎಸ್.ಶರ್ಮ | 2001 |
| ಕೆ. ಗುಂಡಪ್ಪ | 5000 | ವಿ.ಎಸ್. ಮಣಿ | 5000 | ಕೆ.ರಾಜಣ್ಣ | 2000 |
| ಟಿ.ಎನ್. ರವಿಕಿರಣ್ | 5000 | ಜಿ. ಮುತ್ತುಸ್ವಾಮಿ | 5000 | ಆರ್.ರಮೇಶ್ | 2000 |
| ಎಸ್. ಸತ್ಯನಾರಾಯಣ | 5000 | ಜಿ.ಎಸ್. ಸತ್ಯಮೂರ್ತಿ | 5000 | ಕೆ.ಆರ್.ರಮಾದೇವಿ | 2000 |
| ವಿ. ಅರುಣ್ | 5000 | ಬಿ.ಎನ್.ಜಿ. ಪ್ರಸಾದ್ | 5000 | ಗಣೇಶ್ ಶ್ರೀಧರ್ | 1500 |
| ಆರ್. ವೆಂಕಟೇಶ್ ಪ್ರಸಾದ್ | 5000 | ಕೆ.ಎಸ್. ಅನಂತ | 5000 | **ಟಿ.ಎಸ್. ಕೃಷ್ಣನ್** | **2500** |
| ಆರ್.ಎಸ್. ರವಿಕುಮಾರ್ | 5000 | ಆರ್.ಎಸ್. ಗುರುಪ್ರಸಾದ್ | 5000 | | |

**ಸಂಘದ ಅಭಿನಂದನೆಗಳು**

## ಯುವ ಪ್ರತಿಭೆ



ನಮ್ಮ ಸಮುದಾಯದಲ್ಲಿ ಯುವ ಪ್ರತಿಭೆಗಳಿಗೆ ಕೊರತೆಯಿಲ್ಲ. ಸಂಘದ ಯುವ ಸದಸ್ಯ ಶ್ರೀ ಎನ್. ಶಿವಕುಮಾರ್ ನಟರಾಜನ್‌ರವರು ಬ್ಯಾಂಕ್ ಉದ್ಯೋಗಿಯಾಗಿದ್ದು, ಜೊತೆಗೆ ಛಾಯಾಚಿತ್ರಕಾರರಾಗಿ ಹವ್ಯಾಸ ರೂಢಿಸಿಕೊಂಡಿದ್ದಾರೆ. ಪ್ರಾರಂಭದಲ್ಲಿ ಪರ್ವತಚಾರಣ ದೊಂದಿಗೆ ವನ್ಯಜೀವಿ ಮತ್ತು ಪಕ್ಷಿತಾಣಗಳಾದ ಖಾಜಿರಂಗ, ರಣ ತಂಬೂರ, ತಡೋಬ, ಘಿರ್, ಕಬಿನಿ, ಬಂಡೀಪುರ, ದಾಂಡೇಲಿ, ಪ್ರಕೃತಿ ಸೌಂದರ್ಯದ ನೆಲೆಬೀಡಾದ 'ವ್ಯಾಲಿ ಆಫ್ ಫ್ಲವರ್ಸ್', ಹಿಮಾಲಯ ಮತ್ತು ಕರ್ನಾಟಕದ ಐತಿಹಾಸಿಕ ಸ್ಮಾರಕಗಳ ಪ್ರದೇಶಗಳಾದ ಮೇಲುಕೋಟೆ, ಬೇಕಲ್ ಕೋಟೆ, ಹಂಪಿ ಮತ್ತಿತರ ಪ್ರವಾಸಿ ತಾಣಗಳ ಸೆರೆಹಿಡಿದ ಛಾಯಾಚಿತ್ರಗಳು ಜನ ಮೆಚ್ಚುಗೆ ಪಡೆದಿದೆ. ಯುವ ಛಾಯಾಗ್ರಾಹಕರ ತಂಡಗಳನ್ನು ಪ್ರವಾಸಿ ತಾಣಗಳಿಗೆ ಕರೆದೊಯ್ದು ಪರಿಚಯಿಸುವ ಹವ್ಯಾಸ ಬೆಳೆಸಿಕೊಂಡಿದ್ದಾರೆ. ರಾಜ್ಯ ಹಾಗೂ ಅಂತರರಾಜ್ಯ ಛಾಯಾಚಿತ್ರ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ, ಬಹುಮಾನ ಪಡೆದಿರುತ್ತಾರೆ.

ಸಂಘವು ಪ್ರಕಟಿಸುತ್ತಿರುವ **ಬೃಹಚ್ಚರಣ** ಪತ್ರಿಕೆಗೆ ಮೊದಲ ಸಂಚಿಕೆಯಿಂದ (2011) ಸುಮಾರು ಸಾವಿರಕ್ಕೂ ಹೆಚ್ಚು ಛಾಯಾಚಿತ್ರಗಳನ್ನು ಸಂಸ್ಕರಿಸಿ ನೀಡಿರುತ್ತಾರೆ.

ಸಂಘವು ಹಮ್ಮಿಕೊಂಡ ಸಮಾರಂಭಗಳಾದ ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ನಡೆದ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ (1.12.2013, 25.12.2014 ಮತ್ತು 6.12.2015), ಗುರುವಂದನಾ ಕಾರ್ಯಕ್ರಮ (11.9.2016), ಧಾರ್ಮಿಕ ಕ್ಷೇತ್ರ ಮೇಲುಕೋಟೆ ಪ್ರವಾಸ (27.11.2016), ಕಿತ್ತಿಗಾನಹಳ್ಳಿಯಲ್ಲಿ ನಡೆದ ನಾಗಾರಾಧನೆ (2.3.2017), ಸಂಘದ ಸರ್ವ ಸದಸ್ಯರ ಸಭೆ (16.7.2017) ಹಾಗೂ 1.10.2017ರಂದು ನಡೆದ ಸಾಮೂಹಿಕ ಸತ್ಯನಾರಾಯಣಪೂಜೆ ಮತ್ತು ಸಮುದಾಯದ ಹಿರಿಯ ದಂಪತಿಗಳ ಗೌರವ ಸಮರ್ಪಣಾ ಸಮಾರಂಭದ ಒಟ್ಟು ಎಂಟು ಛಾಯಾಚಿತ್ರ ವಿಡಿಯೋವನ್ನು ಸಾಮಾಜಿಕ ಜಾಲತಾಣಕ್ಕಾಗಿ ತಯಾರಿಸಿರುತ್ತಾರೆ. ಆಸಕ್ತಿಯುಳ್ಳ ಹವ್ಯಾಸಿ ಛಾಯಾಗ್ರಾಹಕರಿಗೆ ಸಾಂಪ್ರದಾಯಿಕ ಛಾಯಾಚಿತ್ರ ತೆಗೆಯುವ ಕಲಾ ಶಿಬಿರಗಳನ್ನು ಬೆಂಗಳೂರಿನ ಬಿ.ಟಿ.ಎಂ. ಲೇಔಟ್‌ನಲ್ಲಿ ಸಂಘದ ಅಧ್ಯಕ್ಷ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಶುಭ ಹಾರೈಕೆಯೊಂದಿಗೆ ಪ್ರಾರಂಭಿಸಿದ್ದಾರೆ. ಸಂಘವು ಈ ಯುವ ಪ್ರತಿಭೆಗೆ ಶುಭ ಹಾರೈಸುತ್ತದೆ.

Book-Post

To,

*If un Delivered please return to :*
*President*
**'Brihacharana Sangha'** No. 8, 3rd Cross, Annaiyyappa Block,
Kumarapark West, Bengaluru-560 020.

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Keerthi Printers**, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, 080-26722034